# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:181 • ನೋಂದಣಿ ನಂ.:KARKAN27911 • ವಿಜಯನಗರ • 12.12.2023 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:181 • Reg.No:KARKAN27911 • VIJAYANAGARA • 12.12.2023 • Tuesday • Page:04 • Rs:2







# ಭರ್ತಿಯಾಗಿದ್ದ 2 ಲಕ್ಷ ಲೀ. ಟ್ಯಾಂಕ್ ಖಾಲಿಯಾಗಿದ್ದು ಹೇಗೆ?, ಠಾಣೆಗೆ ದೂರು

## ಕುಡಿವ ನೀರು ಕಳ್ಳತನ ಆರೋಪ । ಅಧಿಕಾರಿಗಳ ಗಮನಕ್ಕಿಲ್ಲದೆ ನೀರು ಬಿಟ್ಟವರಾರು ಎಂಬ ಪ್ರಶ್ನೆಗಿಲ್ಲ ಉತ್ತರ । ವಾಟರ್‌ಮೆನ್‌ಗಳ ಕೈವಾಡ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಹಣ, ಒಡವೆ, ವಸ್ತ್ರ, ಸರಕು-ಸರಂಜಾಮುಗಳು ಕಳ್ಳತನವಾಗುವುದು ಕೇಳಿದ್ದೇವೆ. ಆದರೆ ನೀರು ಕಳ್ಳತನವಾಗಿರುವ ಅಪರೂಪದ ಸುದ್ದಿ ಪಟ್ಟಣದಲ್ಲಿ ಸೋಮವಾರ ನಡೆದಿದೆ.

ಪಟ್ಟಣದ 1, 2, 15ನೇ ವಾರ್ಡಿಗೆ ನೀರು ಕಳ್ಳತನವಾಗಿದೆ. ಈ ಕುರಿತು ಮೂರುವಾರ್ಡಿನ ಸಾರ್ವಜನಿಕರು ಪೋಲೀಸ್ ಠಾಣೆಗೆ ದೂರು ನೀಡಿ, ಇಂದು ಪಟ್ಟಣಪಂಚಾಯತಿಗೆ ಮುತ್ತಿಗೆ ಹಾಕಿದರು.

ಶನಿವಾರ, ತುಂಗಭದ್ರಾ ಜಲಾಶಯದಿಂದ ಹನುಮನಹಳ್ಳಿ ಶುದ್ದೀಕರಣ ಘಟಕದಿಂದ



ಪೂರೈಕೆಯಾಗುವ ನೀರನ್ನು, ವೆಂಕಟಾಪುರ ರಸ್ತೆಯ 2ಲಕ್ಷ ಲೀ.ಸಾಮರ್ಥ್ಯದ ಟ್ಯಾಂಕಿಗೆ ಪೂರೈಕೆ ಮಾಡಿ ತುಂಬಿಸಲಾಗಿದೆ ಎಂದು ವಾರ್ಡಿನ ಸದಸ್ಯ ವಸಂತ್ ತಿಳಿಸಿದರು. 1, 2, 15 ವಾರ್ಡುಗಳಿಗೆ ಭಾನುವಾರ ಸರಬರಾಜಾಗಬೇಕಿದ್ದ ನೀರು ಸರಬರಾಜಾಗದ ಕಾರಣ ವಾರ್ಡಿನ ಸದಸ್ಯರು, ಸಾರ್ವಜನಿಕರು ಅನುಮಾನ ವ್ಯಕ್ತವಾಗು ಟ್ಯಾಂಕ್ ಏರಿ ನೋಡಲು 2ಲಕ್ಷ ಲೀ ಮಾಯಾವಾಗಿದೆ. ಮೂರು ವಾರ್ಡುಗಳಿಗೆ ಸರಬರಾಜಾಗಬೇಕಾದ ನೀರು ಬೇರೆ ವಾರ್ಡುಗಳಿಗೆ ಪೂರೈಕೆಯಾಗಿದೆ ಎಂದು ನಿವಾಸಿಗಳು ಪಟ್ಟಣದ ಠಾಣೆಗೂ ದೂರಿದರು. >>2

> ಮೂರು ವಾರ್ಡುಗಳಿಗೆ ಪೂರೈಕೆಯಾಗುವ ಟ್ಯಾಂಕಿಗೆ ಇಂದು ನೀರು ಶೇಖರಿಸಿ, ಸಂಜೆ ಅಥವಾ ನಾಳೆಗೆ ಪೂರೈಸಲಾಗುವುದು, ವಾಟರ್ ಮನ್ ಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ. ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು.
>
> – **ಗಾದಿಲಿಂಗನಗೌಡ,** ಮುಖ್ಯಾಧಿಕಾರಿ.

> ವಾರ್ಡಿನಲ್ಲಿ ತಿಂಗಳುಗಳಿಂದ ನೀರಿಲ್ಲ, ನಮ್ಮ ವಾರ್ಡುಗಳಿಗೆ ನೀರು ಪೂರೈಸಲು ಇರುವ ಟ್ಯಾಂಕಿಗೆ ನಾವು ತುಂಬಿಸಿದ ನೀರು ವಾಟರ್ ಮನ್ ಗಳು ಬೇರೆ ವಾರ್ಡುಗಳಿಗೆ ಬಿಟ್ಟಿದ್ದಾರೆ. ನಮ್ಮ ವಾರ್ಡಿನ ಟ್ಯಾಂಕಿನ ನೀರು ಬೇರೆ ವಾರ್ಡುಗಳಿಗೆ ಸರಬರಾಜು. ಪೈಪ್ ಲೈನ್ ಇಲ್ಲ. ಅದು ಹೇಗೆ ನೀರು ಹೋಗಿದೆ ಎಂಬುದು ಸೋಜಿಗ
>
> – **ಎಲ್.ವಸಂತ,** ಪ.ಪಂ.ಸದಸ್ಯರು.

## ಮೈಕ್ರೋ ನ್ಯೂಸ್

### ಇಂದು ಎಲ್ಲಿ ಏನು ?

**ಹೊಸಪೇಟೆ:** ಕಲುಬುರಗಿ ವಿಭಾಗೀಯ ಮಟ್ಟದ ಜಾನಪದ ಕಲಾತಂಡಗಳ ತರಬೇತಿ ಕಾರ್ಯಾಗಾರ
ಸ್ಥಳ: ಕನ್ನಡ ವಿಶ್ವವಿದ್ಯಾಲಯ ಭುವನ ವಿಜಯದಲ್ಲಿ
ಸಮಯ: ಬೆಳಿಗ್ಗೆ 10 ಗಂಟೆಗೆ
ಉದ್ಘಾಟಕರು: ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ
ಆಯೋಜನೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ ಸಂಯುಕ್ತಾಶ್ರಯದಲ್ಲಿ

### ಹಸಿವು ನೀಗಿಸುವ ಕಾಲುಗೆ ವಿಷದ ತುತ್ತು!

– ಮಲ್ಲಿಕಾರ್ಜುನ ಹೊಸಪಾಳ್ಯ

ಪುಟ 3ರಲ್ಲಿ ಓದಿ

### ಮನುಷ್ಯನ ಆತ್ಮಬಲ

– ವೀಣಾ ಹೇಮಂತಗೌಡ ಪಾಟೀಲ್

ಪುಟ 2ರಲ್ಲಿ ಓದಿ

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

# ದಮ್ಮು ತಾಖತ್ ಬಿಜೆಪಿ ಶಾಸಕರಿಗಿಲ್ಲ

## ಸಿಎಂ ಸಿದ್ದರಾಮಯ್ಯ ವಾಗ್ದಾಳಿ । ವಿರೋಧಪಕ್ಷಕ್ಕೆ ಆಡಳಿತ ಪಕ್ಷ ಎದುರಿಸುವ ಧೈರ್ಯವಿಲ್ಲ

**ಒಂದು ಸಮರ್ಥ ವಿರೋಧ ಪಕ್ಷ ಇರಬೇಕು ಎಂದು ಬಯಸುವವರು ನಾವು**



■ **ಹಂಪಿ ಟೈಮ್ಸ್ ಬೆಳಗಾವಿ**

ತಮ್ಮ ಪಕ್ಷದೊಳಗಿನ ಒಳಜಗಳ ಮತ್ತು ಬರಗಾಲ ಪರಿಹಾರಕ್ಕೆ ಹಣ ನೀಡದ ಕೇಂದ್ರ ಸರ್ಕಾರದ ವೈಫಲ್ಯವನ್ನು ಮುಚ್ಚಿಹಾಕಿ ಜನರ ಗಮನ ಬೇರೆ ಕಡೆ ಸೆಳೆಯುವ ದುರುದ್ದೇಶ ದಿಂದ ರಾಜ್ಯದ ಬಿಜೆಪಿ ಶಾಸಕರು ವಿಧಾನಸಭೆಯಲ್ಲಿ ಧರಣಿ ನಡೆಸಿ ಕಲಾಪಕ್ಕೆ ತಡೆಯೊಡ್ಡುತ್ತಿದ್ದಾರೆ. ಇವರಿಗೆ ರಾಜ್ಯದ ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ, ಜನತೆ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರಿಗೆ ಜನತೆ ಛೀಮಾರಿ ಹಾಕುತ್ತಿರುವುದಕ್ಕೆ ಚುನಾಯಿತ ಪ್ರತಿನಿಧಿಗಳ ಇಂತಹ ಬೇಜವಾಬ್ದಾರಿ ನಡವಳಿಕೆಗಳೇ ಕಾರಣ.

ಜನರ ತೆರಿಗೆ ಹಣದಿಂದ ಬೆಳಗಾವಿಯಲ್ಲಿ ಸುವರ್ಣ ಸೌಧ ನಿರ್ಮಿಸಿ ವರ್ಷಕ್ಕೊಂದು ಬಾರಿ ವಿಧಾನಮಂಡಲದ ಅಧಿವೇಶನ ನಡೆಸುತ್ತಿರುವುದರ ಮುಖ್ಯ ಉದ್ದೇಶವೇ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳುವುದಾಗಿದೆ. ಇಂತಹ ಚರ್ಚೆಗೆ ಅವಕಾಶವನ್ನೇ ಕೊಡದೆ ಇರುವ ರಾಜ್ಯದ ಬಿಜೆಪಿ ಶಾಸಕರು ತಾವು ಉತ್ತರ ಕರ್ನಾಟಕದ ವಿರೋಧಿಗಳು ಎನ್ನುವುದನ್ನು ಸಾಬೀತು ಪಡಿಸಿದ್ದಾರೆ.

ರಾಜ್ಯದಲ್ಲಿ ತೀವ್ರ ಬರಗಾಲ ಇದೆ. ರಾಜ್ಯ ಸರ್ಕಾರ ಶಕ್ತಿ ಮೀರಿ ಪರಿಹಾರ ಕಾರ್ಯವನ್ನು ನಡೆಸುತ್ತಿದೆ. ರಾಜ್ಯದ 223 ತಾಲ್ಲೂಕುಗಳಲ್ಲಿ ಬರಪರಿಸ್ಥಿತಿ ಇದೆ. ಬರಪರಿಹಾರಕ್ಕಾಗಿ. ರೂ.18,171 ಕೋಟಿ ನೆರವನ್ನು ಕೇಂದ್ರ ಸರ್ಕಾರದಿಂದ ಕೇಳಿದ್ದೇವೆ. 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಆಗಿದೆ. ಈ ನಷ್ಟಕ್ಕೆ ಪರಿಹಾರ ನೀಡಲು ರೂ.4,663 ಕೋಟಿ ಕೇಳಿದ್ದೇವೆ. ಸೆಪ್ಟಂಬರ್ 21 ರಂದು ಬರಪರಿಹಾರಕ್ಕಾಗಿ ಕೇಂದ್ರಕ್ಕೆ ಮೊದಲ ಮನವಿ ಮಾಡಿದ್ದೆವು. ಕೇಂದ್ರದ ತಂಡ ಬಂದು ಸಮೀಕ್ಷೆ ನಡೆಸಿ, ವರದಿಯನ್ನೂ ಕೂಡಾ ನೀಡಿದೆ. ರಾಜ್ಯ ಸರ್ಕಾರದ ಮನವಿಗೆ ಇಲ್ಲಿಯ ವರೆಗೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ನಾವು ಬರೆದ ಪತ್ರಗಳಿಗೆ ಪ್ರತಿಕ್ರಿಯೆ ಇಲ್ಲ. ಪ್ರಧಾನಮಂತ್ರಿಯವರನ್ನು ಭೇಟಿ ಮಾಡಲು ಅವಕಾಶ ಕೇಳಿದರೂ ಕೊಟ್ಟಿಲ್ಲ.

ಡಬಲ್ ಎಂಜಿನ ಸರ್ಕಾರ ಬಂದರೆ ರಾಜ್ಯದಲ್ಲಿ ಹಾಲು-ತುಪ್ಪದ ಹೊಳೆ ಹರಿಯುತ್ತದೆ ಎಂಬ ಬಿಜೆಪಿ ನಾಯಕರ ಹಸಿ ಸುಳ್ಳುಗಳನ್ನು ನಂಬಿ ಕನ್ನಡಿಗರು 25 ಮಂದಿ ಬಿಜೆಪಿ ಸದಸ್ಯರನ್ನು ಲೋಕಸಭೆಗೆ ಕಳಿಸಿದ್ದರು. ಅವರು ಇಲ್ಲಿಯ ವರೆಗೆ ಲೋಕಸಭೆಯಲ್ಲಿ ತುಟಿ ಬಿಚ್ಚಿಲ್ಲ.

ವಿಧಾನಮಂಡಲದಲ್ಲಿ ಬರಗಾಲದ ಚರ್ಚೆ ನಡೆದರೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಈ ಅನ್ಯಾಯದ ವಿವರಗಳೆಲ್ಲವೂ ಹೊರ ಬಂದು ರಾಜ್ಯದ ಜನರ ಎದುರು ತಲೆತಗ್ಗಿಸುವಂತಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ಪಿಳ್ಳೆ ನೆಪಗಳನ್ನು ಮುಂದಿಟ್ಟು ರಾಜ್ಯದ ಬಿಜೆಪಿ ಶಾಸಕರು ಧರಣಿ ನಡೆಸಿ ಕಲಾಪ ನಡೆಯದಂತೆ ತಡೆಯೊಡ್ಡುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದ ಪ್ರಜ್ಞಾವಂತ ಜನತೆ ಇದನ್ನೆಲ್ಲ ಗಮನಿಸುತ್ತಿದ್ದಾರೆ.

ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಆರ್ ಅಶೋಕ್ ಅವರಿಗೆ ಅವರ ಪಕ್ಷದ ಬಹುಸಂಖ್ಯಾತ ಶಾಸಕರ ಬೆಂಬಲವೇ ಇಲ್ಲ. ಪ್ರತಿದಿನ ಅವರದ್ದೇ ಪಕ್ಷದ ಶಾಸಕರು ಒಬ್ಬೊಬ್ಬರಾಗಿ ಅಶೋಕ್ ಅವರ ಮುಖಕ್ಕೆ ಮಂಗಳಾರತಿ ಎತ್ತುತ್ತಿದ್ದಾರೆ. ಯಾವ ಕುರ್ಚಿಯೂ ಸಿಕ್ಕಿಲ್ಲ ಎಂಬ ವೇದನೆಯಿಂದ ಕುದಿಯುತ್ತಿರುವ ಬಸವನಗೌಡ ಪಾಟೀಲ್ ಯತ್ನಾಳ್ >>4

# ಲಿಂಗತ್ವ ದೌರ್ಜನ್ಯ ತಡೆ ಅಭಿಯಾನಕ್ಕೆ ಕೈಜೋಡಿಸಿ

## ಹೊಸಪೇಟೆ ತಾಪಂ ಇಒ ಉಮೇಶ್ ಎಂ. ಮನವಿ




■ **ಹಂಪಿ ಟೈಮ್ಸ್ ಹೊಸಪೇಟೆ**

ಲಿಂಗತ್ವ ದೌರ್ಜನ್ಯ ತಡೆ ಅಭಿಯಾನಕ್ಕೆ ಎನ್.ಆರ್.ಎಲ್.ಎಂ-ಸಂಜೀವಿನಿ ಗ್ರಾಮ ಪಂಚಾಯಿತಿ ಒಕ್ಕೂಟದ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ಕೈಜೋಡಿಸಬೇಕು ಎಂದು ಹೊಸಪೇಟೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ಎಂ. ಅವರು ಹೇಳಿದರು.

ಜಿಲ್ಲಾ ಪಂಚಾಯತ್, ಸಂಜೀವಿನಿ-ಯೋಜನೆ ಹಾಗೂ ಹೊಸಪೇಟೆ ತಾಲ್ಲೂಕು ಪಂಚಾಯತ್ ಸಂಯೋಗದೊಂದಿಗೆ ಸೋಮವಾರ ಹೊಸಪೇಟೆ ತಾಲೂಕು ವ್ಯಾಪ್ತಿಯ ಎನ್.ಆರ್.ಎಲ್.ಎಂ-ಸಂಜೀವಿನಿ ಗ್ರಾಮ ಪಂಚಾಯಿತಿ ಒಕ್ಕೂಟದ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರುಗಳಿಗೆ ಲಿಂಗತ್ವ ದೌರ್ಜನ್ಯ ತಡೆ ಅಭಿಯಾನ ಕಾರ್ಯಕ್ರಮದ ಪ್ರತಿಜ್ಞಾವಿಧಿಯನ್ನು ಭೋಧಿಸುವ ಅವರು ಮಾತನಾಡಿದರು.

ಸಮಾಜದಲ್ಲಿ ಮಹಿಳೆಯು ಶೋಷಣೆಗೆ ಒಳಗಾಗದಂತೆ ಸದೃಢಳಾಗಬೇಕು ಮತ್ತು ಆರ್ಥಿಕ, ಶೈಕ್ಷಣಿಕ ಸಭಲರಾಗಿ ಒಬ್ಬರಿಗೊಬ್ಬರು ಸಹಾಯಕ್ಕೆ ನಿಲ್ಲಬೇಕು. ಈ ಹಿನ್ನೆಲೆಯಲ್ಲಿ ಸಂಜೀವಿನಿ-ಯೋಜನೆ ಹಾಗೂ ತಾಲ್ಲೂಕು ಪಂಚಾಯತ್ ವತಿಯಿಂದ ಲಿಂಗತ್ವ ದೌರ್ಜನ್ಯ ತಡೆಗಟ್ಟಲು ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ತಾಲ್ಲೂಕಿನ 14 ಗ್ರಾಮ ಪಂಚಾಯಿತಿ ಒಕ್ಕೂಟಗಳಲ್ಲಿ ಈ ಅಭಿಯಾನವನ್ನು ಯಶಸ್ವಿಯಾಗಿ ಆಯೋಜಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕಿನ ಎನ್.ಆರ್.ಎಲ್ ಎಂ-ಸಂಜೀವಿನಿ ಯೋಜನೆಯ ಸಹಾಯಕ ನಿರ್ದೇಶಕರು, ವ್ಯವಸ್ಥಾಪಕರು, ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು, ವಲಯ ಮೇಲ್ವಿಚಾರರಕರು, ಯುವ ವೃತ್ತಿಪರರು, ತಾಲ್ಲೂಕಿನ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಮಹಿಳೆಯರು ಭಾಗವಹಿಸಿದ್ದರು.

**ಉಚಿತ ರೋಗ ಪತ್ತೆ** | ಒಬ್ಬ ಹಿಮೋಫಿಲಿಯಾ ರೋಗಿಗೆ ಪ್ರತಿ ವರ್ಷ ಅಂದಾಜು ರೂ. 3 ರಿಂದ 4 ಲಕ್ಷ ವೆಚ್ಚವಾಗಲಿದೆ

# ಹಿಮೋಫಿಲಿಯಾ ಪತ್ತೆಗೆ ಜಿಲ್ಲಾಸ್ಪತ್ರೆಗೆ ಯಂತ್ರ

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದಲ್ಲಿ ಹಿಮೋಫಿಲಿಯಾ ರೋಗವನ್ನು ಶೀಘ್ರದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಿಮೋಫಿಲಿಯಾ ಪತ್ತೆ ಹಚ್ಚುವ ಯಂತ್ರೋಪಕರಣಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಇಂದು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಸದಸ್ಯ ಎಸ್.ರುದ್ರೇಗೌಡ ಅವರ ಚುಕ್ಕೆಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ರಾಜ್ಯ ರಕ್ತಕೋಶ ಕಾರ್ಯಕ್ರಮದಡಿಯಲ್ಲಿ ಹಿಮೋಫಿಲಿಯಾ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ಮತ್ತು ಆರೈಕೆಯನ್ನು ಮಾಡಲಾಗುತ್ತಿದೆ. ಹಿಮೋಫಿಲಿಯಾ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಗಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಕೆಲವು ವೈದ್ಯಕೀಯ ಆಸ್ಪತ್ರೆಗಳಲ್ಲಿ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 6 ರಿಂದ 8 ಹಾಸಿಗೆಗಳ ದಿನದ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಆರೈಕೆ ಕೇಂದ್ರಗಳಲ್ಲಿ ಇಬ್ಬರು ಶುಶ್ರೂಷಕಿಯರಿಗೆ ರಕ್ತಸಂಬಂಧಿತ ಖಾಯಿಲೆಗಳ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಯ ಆರಂಭಿಕ ತರಬೇತಿಯನ್ನು ನೀಡಲಾಗಿದೆ. ಈ ಕೇಂದ್ರಗಳಲ್ಲಿ ಉಚಿತ ಆಂಟಿ ಹಿಮೋಫಿಲಿಯಾ, ಉಚಿತ ರಕ್ತ ನೀಡುವುದು, ಉಚಿತ ಸಮಾಲೋಚನೆ, ಉಚಿತ ಫೀಜಿಯೊಥೆರಪಿ, Intra Cranial Bleeding ಹೆಚ್ಚಿನ ಚಿಕಿತ್ಸೆ, ಉಚಿತ Genetic Counseling, ಉಚಿತ ರೋಗ ಪತ್ತೆ (Screening) ಸೇವೆಗಳನ್ನು ಒದಗಿಸುತ್ತಿದ್ದು, ಒಬ್ಬ ಹಿಮೋಫಿಲಿಯಾ ರೋಗಿಗೆ ಪ್ರತಿ ವರ್ಷ ಅಂದಾಜು ರೂ. 3 ರಿಂದ 4 ಲಕ್ಷ ವೆಚ್ಚವಾಗಲಿದೆ ಎಂದರು.

ಹಿಮೋಫಿಲಿಯಾ ರೋಗಕ್ಕೆ ಸರ್ಕಾರ ನೀಡುತ್ತಿರುವ ಸೌಲಭ್ಯಗಳ ಬಗ್ಗೆ ಪ್ರತಿ ವರ್ಷ ಜಿಲ್ಲಾವಾರು ಕಾರ್ಯಾಗಾರಗಳನ್ನು ಹಿಮೋಫಿ ಲಿಯಾ ಸೊಸೈಟಿ ಸಹಭಾಗಿತ್ವದೊಂದಿಗೆ ಆಯೋಜಿಸಿ ಮಾಹಿತಿಯನ್ನು ನೀಡಲಾಗುತ್ತಿದೆ. ಎಲ್ಲಾ ಹಿಮೋಫಿ ಲಿಯಾ ರೋಗಿಗಳಿಗೆ IEC ಚಟುವಟಿಕೆ ಮತ್ತು ತರಬೇತಿ (Reha bilitation Work shops) ಮುಖಾಂತರ ಹಿಮೋಫಿ ಲಿಯಾ ಆರೈಕೆ ಮತ್ತು ಚಿಕಿತ್ಸೆ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. ಪ್ರತಿ ವರ್ಷ 17ನೇ ಏಪ್ರಿಲ್ ರಂದು ವಿಶ್ವ ಹಿಮೋಫಿಲಿಯಾ ದಿನಾಚರಣೆ ಯನ್ನು ಎಲ್ಲಾ ಜಿಲ್ಲೆಗಳಲ್ಲಿ ಆಚರಿಸಲಾಗುತ್ತಿದ್ದು, ರಾಜ್ಯದಲ್ಲಿ ಈವರೆಗೆ 2706 ಹಿಮೋಫಿಲಿಯಾ ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಇವರಿಗೆ ಆಂಟಿ ಹಿಮೋಫಿಲಿಯಾ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಇದಕ್ಕಾಗಿ ವಾರ್ಷಿಕ 20 ರಿಂದ 30 ಕೋಟಿ ರೂ ವೆಚ್ಚ ಮಾಡಲಾಗುತ್ತಿದೆ ಎಂದರು.

# ಆಂಜನೇಯ ಸ್ವಾಮಿ ರಂಗಸಂಭ್ರಮ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ನೀರಾವರಿ ಇಲಾಖೆಯ ಆವರಣದಲ್ಲಿ ಇಂದಿನಿಂದ ಡಿ.12ರ ಮಂಗಳವಾರದಿಂದ ಡಿ.16ರ ಶನಿವಾರದವರೆಗೂ ಶ್ರೀಆಂಜನೇಯಸ್ವಾಮಿ ಕಾರ್ತಿಕೋತ್ಸವ ನಿಮಿತ್ತ ರಂಗಸಂಭ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆಂಜನೇಯ ಸ್ವಾಮಿ ಸೇವಾ ಸಮಿತಿಯ ಕಾರ್ಯದರ್ಶಿಯಾದ ಈ.ಕೆ.ಮೂರ್ತಿಯವರು ತಿಳಿಸಿದರು.



ಪಟ್ಟಣದಲ್ಲಿ ಅವರು ಮಾತನಾಡಿ, ಪ್ರತಿವರ್ಷದಂತೆ ಕಾರ್ತಿಕೋತ್ಸವದ ಹಿನ್ನೆಲೆಯಲ್ಲಿ ರಂಗಸಂಭ್ರಮವನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಭಾಗಿತ್ವದಲ್ಲಿ ಸಾಣಿಹಳ್ಳಿ ಶಿವ ಸಂಚಾರ ಕಲಾ ತಂಡದಿಂದ ನಾಟಕಗಳ ಪ್ರದರ್ಶನ ಜರುಗಲಿವೆ. ಪ್ರತಿಸಂಜೆ 6ಗಂಟೆಗೆ ಆರಂಭವಾಗುವ ಈ ರಂಗಸಂಭ್ರಮದಲ್ಲಿ ಡಿ.12ರ ಮಂಗಳವಾರ ಸಂಜೆ 6ಕ್ಕೆ "ಜನತೆಗಿರುವ ಚಂದಿರ", ಡಿ.13ರ ಬುಧವಾರ "ತಾಳಿಯ ತಕರಾರು", ಡಿ.14ರ ಗುರುವಾರದಂದು "ಕಲ್ಯಾಣದ ಬಾಗಿಲು", ಡಿ.15ರ ಶುಕ್ರವಾರದಂದು ಪಟ್ಟಣದ ಶ್ರೀಪುಟ್ಟರಾಜ ಗವಾಯಿಗಳ ಸಂಗೀತ ಪಾಠಶಾಲೆಯವರಿಂದ ಸಂಗೀತ ಕಾರ್ಯಕ್ರಮ ಹಾಗೂ ನೃತ್ಯ ಜರುಗಲಿದೆ. ಡಿ.16ರ ಶನಿವಾರದಂದು ಮರಿಯಮ್ಮನಹಳ್ಳಿಯ ಶ್ರೀವಿನಾಯಕ ನೃತ್ಯ ಕಲಾ ಶಾಲೆಯಿಂದ ಭರತನಾಟ್ಯ ಕಾರ್ಯಕ್ರಮ ಜರುಗಲಿದೆ,

ಇದೇ ವೇದಿಕೆಯಲ್ಲಿ ಪಟ್ಟಣದ ಕಲಾವಿದ ದಿ.ಟಿ.ರಾಜರಾವ್‌ರವರ ನುಡಿನಮನ ಇಟ್ಟಿಗಿ ಬಿ.ಸೋಮಸೇಖರ ಗವಾಯಿಗಳು ಮತ್ತು ತಂಡದವರಿಂದ ಸುಗಮ ಸಂಗೀತ ಆದರ್ಶ ಅಂಥ ಕಲಾವಿದರರಿಂದ ವಾದ್ಯಗೋಷ್ಠಿ ಜರುಗಲಿದೆ. ಹೊಸಪೇಟೆಯ ಅಂಜಲಿ ಭರತನಾಟ್ಯ ಕಲಾಕೇಂದ್ರದಿಂದ ಭರತನಾಟ್ಯ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ಡಿ.16ರ ಶನಿವಾರ ಮಧ್ಯಾಹ್ನ 3ಗಂಟೆಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ವಿವಿಧ ವಾದ್ಯಗಳೊಂದಿಗೆ ಶ್ರೀಸ್ವಾಮಿಯ ಪಲ್ಲಕ್ಕಿ ಉತ್ಸವ ಕೂಡ ಜರುಗಲಿದೆ ಎಂದರು.

## ವಚನ ಅರಿವು

### ಸ್ಥಾವರಕ್ಕಳಿವುಂಟು

**ಉಳ್ಳವರು ಶಿವಾಲಯ ಮಾಡಿಹರು,**

**ನಾನೇನ ಮಾಡುವೆ ಬಡವನಯ್ಯಾ.**

**ಎನ್ನ ಕಾಲೇ ಕಂಬ, ದೇಹವೇ ದೇಗುಲ,**

**ಶಿರ ಹೊನ್ನ ಕಲಶವಯ್ಯಾ.**

**ಕೂಡಲಸಂಗಮದೇವಾ, ಕೇಳಯ್ಯಾ**

**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.**

**– ಬಸವಣ್ಣ**

ಹಣವುಳ್ಳ ಶ್ರೀಮಂತರು ದೇವಾಲಯವನ್ನು ಕಟ್ಟಿಸಿ ತಾವು ಪುಣ್ಯವನ್ನು ಗಳಿಸಿಕೊಂಡೆವು ಎನ್ನುವ ಭ್ರಮೆಯಲ್ಲಿ ಇರುತ್ತಾರೆ. ಆದರೆ ಬಡವರಿಗೆ ಗುಡಿ ಕಟ್ಟಿಸಲಾಗುವುದಿಲ್ಲ. ಪುಣ್ಯಕ್ಕಾಗಿ ದೇವರಗುಡಿಗೆ ಹೋಗಿ ಸುತ್ತುವುದಕ್ಕೆ ಅವಕಾಶಗಳಿರುವುದಿಲ್ಲ. ದೇವರ ಹೆಸರಲ್ಲಿ ಪುರೋಹಿತಶಾಹಿಯೇ ದೇವಸ್ಥಾನವನ್ನು ತನ್ನ ಅಧೀನದಲ್ಲಿಟ್ಟುಕೊಂಡು ಭಕ್ತರಿಂದ ಸುಲಿಯುತ್ತದೆ. ಅಂತಹ ದೇವಾಲಯಕ್ಕೆ ಯಾಕೆ ಹೋಗಬೇಕು? ನಿಜ ಭಕ್ತರು ಹೀಗೆ ಹೋಗುವ ಬದಲು ತಮ್ಮ ದೇಹವನ್ನೆ ದೇವಾಲಯ ಮಾಡಿಕೊಳ್ಳುತ್ತಾರೆ.ಆತ್ಮವನ್ನೇದೇವರನ್ನಾಗಿಮಾಡಿಕೊಳ್ಳುತ್ತಾರೆ. ತನ್ನ ದೇಹವೇ ದೇವಾಲಯ, ತನ್ನ ಕಾಲುಗಳೇ ಕಂಬಗಳು, ತನ್ನ ಶಿರವೇ ಬಂಗಾರದ ಕಳಸವಾಗಿದೆ ಆತ್ಮವೇ ಪರಮಾತ್ಮ, ಅರಿವನ್ನು ದೇವರನ್ನಾಗಿ ಮಾಡಿಕೊಳ್ಳಬೇಕು. ಕಟ್ಟಿದ ದೇಗುಲಗಳು ಒಂದಲ್ಲ ಒಂದು ದಿನ ಬಿದ್ದು ನಾಶವಾಗಬಹುದು, ಆದರೆ ಸದಾ ಚಲನೆಯಲ್ಲಿರುವ ತತ್ವ, ವಿಚಾರಗಳ ಜಂಗಮತ್ವಕ್ಕೆ ಅಳಿವಿಲ್ಲ ಎನ್ನುತ್ತಾನೆ ಬಸವಣ್ಣ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

# ಮನುಷ್ಯನ ಆತ್ಮ ಬಲ

ಯಾರಾದರೂ ಇಬ್ಬರು ವ್ಯಕ್ತಿಗಳ ನಡುವೆ ಜಗಳವಾದಾಗ ಅವರು ತಮ್ಮ ತಮ್ಮ ತಾಕತ್ತನ್ನು ತೋರಿಸುತ್ತಾರೆ. ತೋಳ್ಬಲ, ಹಣಬಲ, ಜನಬಲ, ಅಧಿಕಾರ ಬಲ ಎಂದು ಹಲವಾರು ವಿಧದ ಬಲಗಳ ಮೂಲಕ ತಮ್ಮ ಎದುರಿಗಿರುವ ವ್ಯಕ್ತಿಗಳನ್ನು ಗೆಲ್ಲಲು ಪ್ರಯತ್ನಿಸುತ್ತಾರೆ.

ದೈಹಿಕ ಶಕ್ತಿಯುಳ್ಳವನು ಬೇರೆಯವರನ್ನು ತನ್ನ ತೋಳ್ಬಲದಿಂದ ಎದುರಿಸಿದರೆ,ಆರ್ಥಿಕವಾಗಿ ಬಲಿಷ್ಠನಾದವನು ತನ್ನೆದುರಿಗಿರುವವನನ್ನು ಹಣದ ಬಲದಿಂದ ಗೆಲ್ಲಲು ಪ್ರಯತ್ನಿಸುತ್ತಾನೆ. ಮತ್ತೆ ಕೆಲವರು ತಮಗಿರುವ ಸಾಕಷ್ಟು ಅಭಿಮಾನಿಗಳು, ಜನರ ಬೆಂಬಲವನ್ನು ತೋರಿಸಿದರೆ, ಇನ್ನು ಕೆಲವರು ತಾವು ಹೊಂದಿರುವ ಅಧಿಕಾರ, ಅದರ ವ್ಯಾಪ್ತಿ, ಆಳ, ಅಗಲಗಳನ್ನು ಉಪಯೋಗಿಸಿ ತಮ್ಮ ಕೆಲಸ ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ವಾಸ್ತವ ಪ್ರಪಂಚದಲ್ಲಿ ನಡೆಯುತ್ತಿರುವುದು ಇದೇ. ಆದರೆ ಮನುಷ್ಯನ ನಿಜವಾದ ತಾಕತ್ತು ಇರುವುದು ಆತನ ಆತ್ಮಬಲದಲ್ಲಿ. ಆತನ ಶ್ರದ್ದೆ, ಕೆಲಸದೆಡೆಗಿನ ನಿಷ್ಠೆ, ಕಾರ್ಯ ತತ್ಪರತೆಗಳಲ್ಲಿ. ಜಗತ್ತಿನಲ್ಲಿ ಎಲ್ಲರನ್ನೂ ಕಳೆದುಕೊಂಡಾಗ ನಮ್ಮೊಂದಿಗೆ ಇರುವುದು ಕೇವಲ ನಮ್ಮ ಆತ್ಮಬಲ ಮಾತ್ರ. ಹಾಗಾದರೆ ನಿಜವಾದ ಆತ್ಮಬಲವನ್ನು ನಾವು ಎಲ್ಲೆಲ್ಲಿ ಕಾಣಬಹುದು ಎಂಬುದನ್ನು ತುಸು ನಿಖರವಾಗಿ ಅರಿಯೋಣ. ಅದೆಷ್ಟೇ ನೋವು ನಿರಾಸೆಗಳನ್ನು ಅನುಭವಿಸಿದ್ದರೂ ಆ ಹ್ ನೋವಿನ ಗಾಯವನ್ನು ಮತ್ತೆ ಕೆದಕದೆ, ಅವುಗಳಿಗೆ ಮುಲಾಮು ಸವರಿ ವಾಸಿಗೊಳಿಸಿಕೊಳ್ಳುವುದು ಮನುಷ್ಯನ ಅತಿ ದೊಡ್ಡ ಶಕ್ತಿ ಅದುವೇ ಆತನ ಆತ್ಮಬಲ.

ನಮ್ಮೆದುರಿಗಿರುವ ವ್ಯಕ್ತಿ ನಮ್ಮನ್ನು ತಿರಸ್ಕಾರದಿಂದ ನೋಡಿದಾಗ, ನಮ್ಮನ್ನು ಅವಹೇಳನ ಮಾಡಿದಾಗಲೂ ಕೂಡ ಪದೇ ಪದೇ ಅವರ ಸ್ನೇಹಕ್ಕಾಗಿ ಕೈ ಚಾಚುವುದು ನಮ್ಮ ಬಲಹೀನತೆಯಾಗುತ್ತದೆ. ಅದರ ಬದಲಾಗಿ ಅಂತಹವರನ್ನು ದೂರವಿರಿಸಿ ನಮ್ಮ ವೈಯುಕ್ತಿಕ ಘನತೆ ಗೌರವವನ್ನು ಕಾಪಾಡಿಕೊಳ್ಳುವುದು ನಿಜವಾದ ಆತ್ಮಬಲ.

ಜಗತ್ತಿನ ಉಳಿದೆಲ್ಲರೂ ನಮ್ಮನ್ನು ನಂಬದೇ ಇದ್ದಾಗಲೂ ಕೂಡ ನಮ್ಮನ್ನು ನಾವು ನಂಬುವುದು, ನಮ್ಮಿಂದ ಈ ಕೆಲಸ ಸಾಧ್ಯ ಎಂಬ ವಿಶ್ವಾಸ ಮೂಡಿಸುವುದು ನಮ್ಮಲ್ಲಿರುವ ಆತ್ಮ ಬಲ. ಕೆಲವೊಮ್ಮೆ ಸಂಬಂಧಗಳಲ್ಲಿ ಕೂಡ ಜನರು ನಮ್ಮನ್ನು ಬೇಕೆಂದೆ ಕೀಳಾಗಿ ತೋರಿಸಲೆಂದು ಅವಹೇಳನ ಮಾಡುತ್ತಾರೆ. ಸ್ನೇಹಿತರನ್ನು ನಮ್ಮ ವಲಯದಿಂದ ದೂರವಿರುವುದು ಸರಳ ಆದರೆ ಸಂಬಂಧಿಕರು ಪದೇಪದೇ ನಮ್ಮ ಪರಿಚಯದ ಪರಿಧಿಯಲ್ಲಿ ಕಾಣಿಸುತ್ತಾರೆ. ಇನ್ನು







**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ**

ಕೆಲವೊಮ್ಮೆ ಮನೆಯಲ್ಲಿಯೇ ಇರುವ ಸಂಗಾತಿ, ಮಕ್ಕಳು, ಅತ್ತೆ, ಮಾವ, ನಾದಿನಿ ಹೀಗೆ ಅವರವಲ್ಲಿಯೇ ಯಾವುದಾದರೂ ಒಂದು ರೀತಿಯ ಅನಪೇಕ್ಷಿತ ಮಾತುಕತೆ ನಡೆದು ಮನಸ್ಸು ಕಹಿಯಾಗಿರುತ್ತದೆ. ಅಂತಹ ಸಮಯದಲ್ಲಿ ಜೊತೆಗಿದ್ದು ಅವರೊಂದಿಗೆ ಅಂತರ ಕಾಯ್ದುಕೊಳ್ಳುವುದು ಸುಲಭ ಸಾಧ್ಯವಲ್ಲ ನಿಜ, ಆದರೆ ಕುಳಿತು ಮಾತನಾಡಿ ಕೆಲವಷ್ಟು ವಿಷಯಗಳನ್ನಾದರೂ ಬಗೆಹರಿಸಿಕೊಳ್ಳುವುದು ಉತ್ತಮ. ಆ ಕಾರ್ಯವು ಕೂಡ ಯಶಸ್ವಿಯಾಗದಿದ್ದರೆ ಖಂಡಿತವಾಗಿಯೂ ನಿಮ್ಮ ಮನಸ್ಸು ಆಗ ಅವರಿಂದ ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳಲು ಬಯಸುತ್ತದೆ. ಹಾಗೆ ನಿಮ್ಮ ಬಯಕೆಯನ್ನು ಕಾರ್ಯರೂಪಕ್ಕೆ ತರುವುದು ಕೂಡ ನಿಮ್ಮ ಆತ್ಮ ಬಲವನ್ನು ಸೂಚಿಸುತ್ತದೆ.

ಕೆಲವೊಮ್ಮೆ ನಾವು ಕೆಲಸ ಮಾಡುವ ಸ್ಥಳಗಳಲ್ಲಿ ನಾವು ಅನುಚಿತ ಮತ್ತು ಅನಪೇಕ್ಷಿತ ಘಟನೆಗಳಿಗೆ ಈಡಾಗಬಹುದು ಅಂತಹ ಘಟನೆಗಳು ಆಗದಂತೆ ಎಚ್ಚರ ವಹಿಸಬೇಕು. ಇನ್ನು ಕೆಲವೊಮ್ಮೆ ಆ ಘಟನೆಯ ಹಿಂದೆ ಇರುವ ಕಾರಣಗಳನ್ನು ಅರಿತು ಸಂಬಂಧಪಟ್ಟವರೊಂದಿಗೆ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು.

ಮನುಷ್ಯನ ಜೀವನ ಅತ್ಯಂತ ಸರಳವಾದುದು.... ನಾವು ಹೇಳುವ ಕೆಲ ಸುಳ್ಳುಗಳು, ತಪ್ಪು ಅಭಿಪ್ರಾಯಗಳು, ತೆಗೆದುಕೊಳ್ಳುವ ಅವಸರದ ನಿರ್ಧಾರಗಳು ಬದುಕನ್ನು ಜಟಿಲಗೊಳಿಸುತ್ತವೆ. ಆದ್ದರಿಂದ ಮನುಷ್ಯ ತನ್ನ ವ್ಯವಹಾರಗಳಲ್ಲಿ ನೇರವಾಗಿ ಮತ್ತು ಸತ್ಯಪರನಾಗಿ ಇರಬೇಕು. ಒಂದು ಸುಳ್ಳನ್ನು ಹೇಳಿ ಹಲವು ಬಾರಿ ಒದ್ದಾಡುವುದಕ್ಕಿಂತ ನಿಜವನ್ನು ಹೇಳುವುದು ಒಳ್ಳೆಯದು... ಇರುವ ಸತ್ಯವನ್ನು ಒಪ್ಪಿಕೊಳ್ಳುವುದು ಕೂಡ ನಮ್ಮ ಆತ್ಮ ಬಲವನ್ನು ಸೂಚಿಸುತ್ತದೆ. ನಮ್ಮ ದೃಷ್ಟಿಯಲ್ಲಿ ನಮ್ಮನ್ನು ಸಣ್ಣವರನ್ನಾಗಲು ಬಿಡುವುದಿಲ್ಲ.

ತಪ್ಪನ್ನು ತಪ್ಪು ಎಂದು ಹೇಳುವಾಗಲು ಸರಿಯನ್ನು ಸರಿಯೆಂದು ಪರಿಗಣಿಸುವಾಗಲೂ ಬೇಕಾಗುವುದು ಆತ್ಮ ಬಲ. ಯಾರದ್ದೋ ಭಿಡೆಗೆ,ಹಿರಿಯರೆಂಬ ಅನುಸರಣೆಗೆ, ಕಿರಿಯರೆಂಬ ಸಲಿಗೆಗೆ ಒಳಗಾಗಿ ಹೋಗಲಿ ಬಿಡಿ ಎಂಬ ಭಾವ ಬೇಡ. ಹೀಗೆ ಮಾಡುವುದರಿಂದ ತತ್ ಕ್ಷಣಕ್ಕೆ ನಿರಾಳವೆನಿಸಿದರೂ ಇದರ ಪರಿಣಾಮ ಹಿರಿಯರಲ್ಲಿ ನಮ್ಮ ಬಗ್ಗೆ ಅಸಡ್ಡೆ, ಏನು ಹೇಳಿದರೂ ನಡೆಯುತ್ತದೆ ಎಂಬ ಭಾವ, ಸತ್ಯವನ್ನು ಒಪ್ಪಿಕೊಳ್ಳದ ಅದಕ್ಕೆ ಮೇಲ್ಮುಸುಗು ಹಾಕುವ ನಮ್ಮ ಪ್ರಯತ್ನ ಮೂಗು ಮುರಿಯುವಂತೆ ಮಾಡುತ್ತದೆ.

ಮಕ್ಕಳಲ್ಲಿ ನಮ್ಮ ಕುರಿತು ಅನಾದರ ಮತ್ತು ಉಪೇಕ್ಷೆ ಬೆಳೆಯುತ್ತದೆ ಅವರಷ್ಟೇ ಬಿಡು ಎಂಬಂತಹ ಉದಾಸ ಭಾವ ಸಹಿಸುವುದು ಬಹಳ ಕಷ್ಟ. ಇದರ ಬದಲಾಗಿ ನಮ್ಮ ಆತ್ಮ ಸಾಕ್ಷಿಗೆ ಅನುಗುಣವಾಗಿ ಇರುವುದನ್ನು ಇರುವಂತೆಯೇ ಹೇಳುವುದರಲ್ಲಿ ಒಳಿತಿದೆ. ಏನಂತೀರಾ ಸ್ನೇಹಿತರೆ ?

## ಡಿ.12ರಿಂದ ಕಮಲಾಪುರದಲ್ಲಿ ಪ್ರವಾಸಿ ಮಾರ್ಗದರ್ಶಿಗಳ ಪುನಶ್ಚೇತನ ತರಬೇತಿ ಕಾರ್ಯಾಗಾರ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸೋದ್ಯಮ ಇಲಾಖೆಯಿಂದ 179 ಪ್ರವಾಸಿ ಮಾರ್ಗದರ್ಶಿಗಳ ಪುನಶ್ಚೇತನತರಬೇತಿ ಕಾರ್ಯಾಗಾರವನ್ನು ಡಿ.12ರಿಂದ 14ರವರೆಗೆ ಹಮ್ಮಿಕೊಂಡಿದ್ದು, ಉದ್ಘಾಟನಾ ಕಾರ್ಯಕ್ರಮವು ಡಿ.12ರಂದು ಬೆಳಿಗ್ಗೆ 9 ಗಂಟೆಗೆ ಕಮಲಾಪುರದ ಹೋಟೆಲ್ ಮಯೂರ ಭುವನೇಶ್ವರಿಯಲ್ಲಿ ನಡೆಯಲಿದೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಅಧ್ಯಕ್ಷತೆಯಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಪ್ರವಾಸಿ ಮಾರ್ಗದರ್ಶಿಗಳು ಈ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವಂತೆ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗ ತಳಿಕೇರಿ ಅವರು ತಿಳಿಸಿದ್ದಾರೆ.

## ತುಂಬಿದ ನೀರಿನ ಟ್ಯಾಂಕ್ ಖಾಲಿ

ಮೊದಲ ಪುಟದಿಂದ

ಸೋಮವಾರ ಪಟ್ಟಣ ಪಂಚಾಯತಿಗೆ ಮುತ್ತಿಗೆ ಹಾಕಿ, ವಾರ್ಡಿನ ನಿವಾಸಿಗಳು ಅಧಿಕಾರಿಗಳಿಗೆ, ವಾಟರ್ ಮನ್ ಗಳಿಗೆ ತರಾಟೆಗೆ ತೆಗೆದು ಕೊಂಡರು. ಪಟ್ಟಣದ ಪಿ.ಎಸ್.ಐ. ಮೌನೇಶರಾಥೋಡ್ ಮತ್ತು ಸಿಬ್ಬಂದಿಗಳು ಮಧ್ಯಸ್ಥಿಕೆವಹಿಸಿ ಸಮಸ್ಯೆಯನ್ನು ತಿಳಿಗೊಳಿಸಿದರು. ಈ ಸಂಧರ್ಭದಲ್ಲಿ ಎಲ್. ವೆಂಕಟೇಶ್, ಎಲ್. ಪ್ರಶಾಂತ್, ಎಲ್. ಕುಮಾರ,ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಎಲ್, ಮಂಜುನಾಥ, ಮಾಜಿ ಪಟ್ಟಣ ಪಂಚಾಯತಿ ಸದಸ್ಯರು ಬಿಸ್ನಳ್ಳಿ ಆನಂದ, ಎಲ್. ಹನುಮಂತ, ಮಾಳಿಗೆ ಹನುಮಂತ, ಹರಿಯಮ್ಮನವರ ರಮೇಶ, ಮಿಸಿ ಎಲ್. ನಾಗರಾಜ, ಮಂಜುನಾಥ್, ದಾಸರ ಮಹಾಂತೇಶ್, ಪೈಲ್ವಾನ್ ವೆಂಕಟೇಶ್, ವಲಾಪುರ ಪರುಶುರಾಮ್, ಮಳಿಗಿ ಕೋಮರೆಪ್ಪ, ಬಾನಿ ಪರುಶುರಾಮ್, ಪ್ಯಾಂನ್ಸ್ ಪರುಶುರಾಮ್ ಸೇರಿದಂತೆ ಇತರರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

## 5 ವಿಧೇಯಕಗಳಿಗೆ ಅಂಗೀಕಾರ

**ಹಂಪಿ ಟೈಮ್ಸ್ ಸುವರ್ಣಸೌಧ ಬೆಳಗಾವಿ**

ಸೋಮವಾರದ ವಿಧಾನ ಸಭಾ ಕಲಾಪದಲ್ಲಿ 5 ಪ್ರಮುಖ ವಿಧೇಯಕಗಳಿಗೆ ಅನುಮೋದನೆ ನೀಡಿ ಅಂಗೀಕರಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, 2023ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಎರಡನೇ ತಿದ್ದುಪಡಿ ವಿಧೇಯಕವನ್ನು ಸದನದಲ್ಲಿ ಪರ್ಯಾಲೋಚನೆಗೆ ಮಂಡಿಸಿ, ಕೇಂದ್ರ ಜಿ.ಎಸ್.ಟಿ. ಕೌನ್ಸಿಲ್ ಸೂಚಿಸಿದ ಆಧಾರದಲ್ಲಿ ತಿದ್ದುಪಡಿ ವಿಧೇಯ ಮಂಡಿಸಲಾಗಿದೆ. ಕ್ಯಾಸಿನೋ, ಆನ್‍ಲೈನ್ ಬೆಟ್ಟಿಂಗ್ ನಿಯಂತ್ರಿಸಲು ವಿಧೇಯಕ ಸಹಕಾರಿಯಾಗಲಿದೆ ಎಂದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಪರವಾಗಿ 2023ನೇ ಸಾಲಿನ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತಿದ್ದುಪಡಿ ವಿಧೇಯಕವನ್ನು ಸದನದಲ್ಲಿ ಪರ್ಯಾಲೋಚನೆಗೆ ಮಂಡಿಸಿದರು.

ಈ ಮೊದಲು ರಾಜ್ಯದಲ್ಲಿ ವೈದ್ಯಕೀಯ ಪದವಿ ಪೂರೈಸಿದವರು ಕಡ್ಡಾಯವಾಗಿ ಒಂದು ವರ್ಷಗಳ ಗ್ರಾಮೀಣ ಸೇವೆ ಸಲ್ಲಿಸಬೇಕಾಗಿತ್ತು. ಸದ್ಯ ಸರ್ಕಾರ ಖಾಲಿ ಇರುವ ವೈದ್ಯರ ನೇಮಕಾತಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳುತ್ತಿದೆ. ಇದರೊಂದಿಗೆ ಸ್ನಾತಕೋತ್ತರ ಅಧ್ಯಯನ ಮಾಡುವ ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಾಗಿ ಇರುವುದರಿಂದ ಕಡ್ಡಾಯ ಸೇವೆ ಬದಲಿಗೆ ರಾಜ್ಯ ಸರ್ಕಾರ ಸೂಚಿಸಿದಲ್ಲಿ ಸೇವೆ ಸಲ್ಲಿಸುವ ಅವಕಾಶ ತಿದ್ದುಪಡಿ ಅವಕಾಶದಲ್ಲಿ ಕಲ್ಪಿಸಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ನಂತರ 2023ನೇ ಸಾಲಿನ ಕರ್ನಾಟಕ ಸ್ಟಾಂಪು ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚನೆಗೆ ಮಂಡಿಸಿ, 1994, 2000 ಹಾಗೂ 2011 ರಿಂದಲೂ ರಾಜ್ಯದಲ್ಲಿ ಸುಮಾರು 54 ವಿವಿಧ ದಾಖಲೆಗಳ ಮೇಲೆ ವಿಧಿಸಲಾಗುತ್ತಿದ್ದ ಸ್ಟಾಂಪು ಮೇಲಿನ ಶುಲ್ಕವನ್ನು ಬದಲಾಯಿಸಿಲ್ಲ. ಈ ಶುಲ್ಕಗಳ ಮೇಲಿನ ದರ ಪರಿಷ್ಕರಣೆ ಮಾಡುವ ಸಲುವಾಗಿ ವಿಧೇಯಕದಲ್ಲಿ ತಿದ್ದುಪಡಿ ತರಲಾಗಿದೆ. ಸದನ ಇದಕ್ಕೆ ಅನುಮೊದನೆ ನೀಡುವಂತೆ ಕೋರಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪರವಾಗಿ 2023ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಸಚಿವ ಕೃಷ್ಣ ಬೈರೇಗೌಡ ಸದನದಲ್ಲಿ ಪರ್ಯಾಲೋಚನೆಗೆ ಮಂಡಿಸಿದರು.

ರಾಜ್ಯದ ಮಲೆನಾಡು ಭಾಗದ ಜಿಲ್ಲೆಗಳಲ್ಲಿ ಪ್ರತಿ ಹಂದಿನೆಂಟು ಸಾವಿರದಿಂದ ಇಪ್ಪತ್ತೈದು ಸಾವಿರದ ನಡುವಣ ಗ್ರಾಮೀಣ ಜನಸಂಖ್ಯೆಗೆ ಓರ್ವ ಜಿಲ್ಲಾ ಪಂಚಾಯತಿ ಸದಸ್ಯರ ಆಯ್ಕೆಗೆ ಅವಕಾಶ ಕಲ್ಪಿಸಿ ತಿದ್ದುಪಡಿ ವಿಧೇಯಕ ತರಲಾಗಿದೆ. ಏಳು ಲಕ್ಷಕ್ಕಿಂತ ಒಂಬತ್ತು ಲಕ್ಷದ ಐವತ್ತು ಸಾವಿರವನ್ನು ಮೀರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆಯ ಸಂದರ್ಭದಲ್ಲಿ 28 ಜಿಲ್ಲಾ ಪಂಚಾಯತಿ ಸದಸ್ಯರು ಇರಲು ಮಿತಿ ಹೆಚ್ಚಿಸಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ಶಾಸಕ ಪೊನ್ನಣ್ಣ, ಡಾ.ಮಂಥರ್ ಗೌಡ, ಮಲೆನಾಡು ಭಾಗದಲ್ಲಿ ಹದಿನೇಳು ಸಾವಿರದಿಂದ ಇಪ್ಪತ್ತೈದು ಸಾವಿರದ ನಡುವಣ ಗ್ರಾಮೀಣ ಜನಸಂಖ್ಯೆಗೆ ಓರ್ವ ಜಿಲ್ಲಾ ಪಂಚಾಯತಿ ಸದಸ್ಯರ ಆಯ್ಕೆಗೆ ಅವಕಾಶ ಕಲ್ಪಿಸಿ ತಿದ್ದುಪಡಿ ಮಾಡಬೇಕು ಎಂದು ಕೋರಿದರು.

ರೋಣ ಶಾಸಕ ಜಿ.ಎಸ್.ಪಾಟೀಲ್ ರಾಜ್ಯದ ಎಲ್ಲಡೆ ಇಪ್ಪತ್ತೈದು ಸಾವಿರದಿಂದ ಮುವತ್ತೈದು ಸಾವಿರದ ನಡುವಣ ಗ್ರಾಮೀಣ ಜನಸಂಖ್ಯೆಗೆ ಓರ್ವ ಜಿಲ್ಲಾ ಪಂಚಾಯತಿ ಸದಸ್ಯರ ಆಯ್ಕೆಗೆ ಅವಕಾಶ ಕಲ್ಪಿಸಬೇಕು ಎಂದು ಕೋರಿದರು.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ವ್ಯಾಪ್ತಿಗೆ ಒಳಪಟ್ಟಂತೆ ಇರುವ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಬದಲಿಗೆ, ಕರಾವಳಿ ಅಭಿವೃದ್ಧಿ ಮಂಡಳಿ ಸ್ಥಾಪಿಸುವ ವಿಧೇಯಕವನ್ನು ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಸದನದಲ್ಲಿ ಪರ್ಯಾಲೋಚನೆಗೆ ಮಂಡಿಸಿದರು.

ಚರ್ಚೆಗಳ ತರುವಾಯ ವಿಧೇಯಕಗಳನ್ನು ಸಭಾಧ್ಯಕ್ಷ ಯು.ಟಿ.ಖಾದರ್ ಸದನ ಮುಂದೆ ತಂದರು. ಸದನವು ತನ್ನ ಅನುಮೋದನೆಯೊಂದಿಗೆ ಅಂಗೀಕಾರ ನೀಡಿತು. ವಿಧಾನ ಸಭೆಯಲ್ಲಿ ಅಂಗೀಕಾರಗೊಂಡ ವಿಧೇಯಕಗಳು ಇದೇ ಅಧಿವೇಶನದಲ್ಲಿ ವಿಧಾನ ಪರಿಷತ್‍ನಲ್ಲಿ ಚರ್ಚೆಗೆ ಬರಲಿವೆ.

## ಆನೆ ಹಾವಳಿ ತಡೆಗೆ 200 ಕೋಟಿ ರೂ ವೆಚ್ಚದಲ್ಲಿ ಬ್ಯಾರಿಕೇಡ್ ನಿರ್ಮಾಣ

**ಹಂಪಿ ಟೈಮ್ಸ್ ಸುವರ್ಣಸೌಧ ಬೆಳಗಾವಿ**

ರಾಜ್ಯದಲ್ಲಿ ಆನೆ ಮತ್ತು ಮಾನವ ಸಂಘರ್ಷ ತಪ್ಪಿಸಲು 200 ಕೋಟಿ ರೂ ವೆಚ್ಚದಲ್ಲಿ ಬ್ಯಾರಿಕೇಡ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಇಂದು ವಿಧಾನ ಪರಿಷತ್‍ನಲ್ಲಿ ತಿಳಿಸಿದರು.

ಸದಸ್ಯ ಕೆ.ಹರೀಶ್ ಕುಮಾರ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು , ಆನೆಗಳು ಜನವಸತಿ ಪ್ರದೇಶಕ್ಕೆ ಬರುವುದನ್ನು ತಡೆಯಲು 640 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ 312 ಕಿ.ಮೀ. ಬ್ಯಾರಿಕೇಡ್ ಅಳವಡಿಸಲಾಗಿದ್ದು, ಒಟ್ಟು 200 ಕೋಟಿ ರೂ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ನಡೆಯುತ್ತಿದೆ. ಆನೆ ಹಾವಳಿಯಿಂದ ಬೆಳೆ ಹಾನಿಗೊಳಗಾದ ರೈತರಿಗೆ ಶೆ.90 ರಷ್ಟು ಪ್ರಕರಣಗಳಲ್ಲಿ ಪರಿಹಾರ ವಿತರಿಸಲಾಗಿದ್ದು, ಮಾನವ ಜೀವಹಾನಿಗೆ ಹೆಚ್ಚಿನ ಪರಿಹಾರ ನೀಡಲಾಗುವುದು ಎಂದರು.

ರಾಜ್ಯದಲ್ಲಿ ದಟ್ಟ ಅರಣ್ಯ ವ್ಯಾಪ್ತಿಯಲ್ಲಿ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಕಾಡಾನೆ ಹಾಳಿಯನ್ನು ತಡೆಯುವ ನಿಟ್ಟಿನಲ್ಲಿ ಹೆದ್ದಾರಿ ಪಕ್ಕದಲ್ಲಿ ಆನೆಗಳ ಇರುವಿಕೆಯ ಬಗ್ಗೆ ಎಚ್ಚರಿಕಾ ಫಲಕಗಳನ್ನು ಅಳವಡಿಸಲಾಗಿದೆ. ಕಾಡಾನೆ ಹಾವಳಿ ಹೆಚ್ಚಳವಾಗಿರುವ ಹಾಸನ, ಕೊಡಗು, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು, ಚಾಮರಾಜನಗರ, ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನು ಒಳಗೊಂಡ ಆನೆ ಕಾರ್ಯಪಡೆಯನ್ನು ರಚಿಸಲಾಗಿದೆ.

ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಮನೆ ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (ಖಖಖ) ರಚಿಸಿ ನಿರ್ವಹಿಸಲಾಗುತ್ತಿದೆ. ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್ ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆ ಹಿಡಿದು ಆಗ್ಗಿಂದಾಗ್ಗೆ ಸ್ಥಳಾಂತರಿಸಲಾಗುತ್ತಿದೆ. ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದರು.

## ಕವಿ ಮನಸು

### ಸಾವಿಲ್ಲವೆ ಇಲ್ಲಿ

ನಮಗೆ ಹಸಿವು ನಿಲ್ಲಬೇಕು
ರೊಟ್ಟಿ ಕೊಡಿ ಇಲ್ಲ ಜಾಗ ಬಿಡಿ
ಗುಡಿ ಚರ್ಚು ಮಸೀದಿ ಬೇಡ
ಒಂದಷ್ಟು ಮದ್ದು ಕೊಡಿ
ಇಲ್ಲ ಹಸಿರು ಹಾಗೆ ಬಿಡಿ
ಭತ್ತ ಅನ್ನ ಆಗುವ ಮುನ್ನ
ಗೋಧಿ ರೊಟ್ಟಿ ಆಗುವ ಮುನ್ನ
ಮಾನವೀಯತೆ ತುಂಬಿ ಕೊಡಿ

ಎಲ್ಲರಂತೆ ಹೆತ್ತ ತಾಯಿ ಮಕ್ಕಳು
ಎಲ್ಲರೂ ನೆಲದ ಮೇಲೆ ಬೆಳೆದು
ದೊಡ್ಡವರಾಗಿದ್ದಾರೆ. ದಾರಿ ಎಲ್ಲರಿಗೂ
ಕ್ಷೇಮವಾಗಿರುತ್ತದೆ. ಸುಸಜ್ಜಿತ ಪಯಣ
ಮಾಡಿಸುವುದು.

ಬೇಲಿ ಇದ್ದಲ್ಲಿ ಹೊಲ ಕಾಯಬೇಕು
ಎದ್ದು ಕಬಳಿಬೇಡ .
ಗಡಿ ಇದ್ದಲ್ಲಿ ರಕ್ತ ಕುದಿಸಬೇಡ
ಬಂದೂಕಿನ ಬಾಯಲ್ಲಿ ದೇವರು ಮತ್ತು
ಧರ್ಮ ವಾಸಿಸಲು ಸಾಧ್ಯವಿಲ್ಲ . ಮತ್ತೂ
ಎಲ್ಲವೂ ಮಣ್ಣಾಗುವುದು ನೆನಪಿಡು.
ಧರ್ಮ ಯಾವುದೇ ಇರಲಿ ಆತ ಮನುಷ್ಯ
ಮಾತ್ರ ಪ್ರಾಣ ಕಾಯೋಣ .

ಕಾಡ ತುಂಬಾ ಇಬ್ಬನಿಗಳಂತೆ ಮುತ್ತಿಡು
ಆದ ಅವಶೇಷಗಳಿಗೆ ಕಂಬನಿ ಮಿಡಿ
ಜೀವಿಗಳಿಗೆ ವಾಸಿಸಲು ಸ್ಥಳ ವಿರಲು ಬಿಡಿ
ನಾವು ಯಾರಿಗೂ ಏನನ್ನೂ ಕೊಟ್ಟವರಲ್ಲ.
ಹಕ್ಕಿಯಂತೆ ಹಾರುವುದನ್ನು ಅರಿತು
ಹಾರಿಬಿಡು
ಗೂಡು ಬರಿದಾದಾಗ ಅತ್ತು
ಕಂಬನಿ ಒರೆಸುವುದನ್ನು ಕಲಿತು ಬಿಡು //

– ಮುದೇನೂರು ಉಮಾಮಹೇಶ್ವರ
ಹೊಸಪೇಟೆ.

PLACE YOUR ADVT.
HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 11-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1591.32 ಅಡಿ |
| ಒಳ ಹರಿವು | 701 ಕ್ಯುಸೆಕ್ |
| ಹೊರ ಹರಿವು | 2484 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 12.171 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.29 ಅಡಿ |
| ಒಳ ಹರಿವು | 367 ಕ್ಯುಸೆಕ್ |
| ಹೊರ ಹರಿವು | 6534 ಕ್ಯುಸೆಕ್ |
| ಸಾಮರ್ಥ್ಯ | 87.779 ಟಿಎಂಸಿ |

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

### ಬಸವಣ್ಣ ಕಾಲುವೆ ಕಟ್ಟಿಸಿದ ದೊರೆ ಯಾರು ಗೊತ್ತೆ?

# ಹಸಿವು ನೀಗಿಸುವ ಕಾಲುವೆಗೆ ವಿಷದ ತುತ್ತು!

ನಗರದ ಸಾಯಿಬಾಬಾ ಸರ್ಕಲ್ ಕಡೆಯಿಂದ ಹೊಸಪೇಟೆಗೆ ಬರುವಾಗ ನಾಗಪ್ಪನಕಟ್ಟೆಯ ಬಳಿ ಒಂದು ಕಾಲುವೆ ಕಾಣುತ್ತದೆ. ಹೊಸಪೇಟೆ ನಗರದ ಮಧ್ಯಭಾಗದಲ್ಲಿಯೇ ಹರಿದು ಮುಂದೆಸಾಗುವ ಇದರ ಹೆಸರು ಬಸವಣ್ಣಕಾಲುವೆ. ನೋಡಿದ ಕೂಡಲೇ ನಗರದ ಕೊಳಕನ್ನು ಸಾಗಿಸುವ ಚರಂಡಿಯಂತೆ ಭಾಸವಾಗುವ ಇದರ ಇತಿಹಾಸ ಕೇಳಿದರೆ ಅಚ್ಚರಿಯಾಗದೇ ಇರದು. ಈ ಕಾಲುವೆ 500 ವರ್ಷಗಳಷ್ಟು ಪ್ರಾಚೀನವಾದುದು. ಇದನ್ನು ನಿರ್ಮಿಸಿದವರು ಯಾರು ಗೊತ್ತೇ? ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ದೊರೆ ಶ್ರೀಕೃಷ್ಣದೇವರಾಯ.

1509ರಲ್ಲಿ ಪಟ್ಟಕ್ಕೆ ಬಂದ ಕೃಷ್ಣದೇವರಾಯ ತನ್ನ ಹಿರಿಯಪತ್ನಿ ತಿರುಮಲಾದೇವಿಗಾಗಿ 1520ನೇ ಇ ಸವಿಯ ಆಸು-ಪಾಸು ಹೊಸಪಟ್ಟಣ ನಿರ್ಮಿಸುತ್ತಾನೆ. ಅದೇ ಇಂದಿನ ಹೊಸಪೇಟೆ. ಈ ಪಟ್ಟಣಕ್ಕೆ ನೀರೊದಗಿಸುವ ಸಲುವಾಗಿ ಪ್ರಸ್ತುತ ತುಂಗಭದ್ರಾ ಜಲಾಶಯ ಇರುವ ಮುನಿರಾಬಾದ್ನಿಂದ 12 ಮೈಲಿ ಮೇಲ್ಭಾಗದಲ್ಲಿದ್ದ ಕೋರಗಲ್ ಎಂಬ ಸ್ಥಳದಲ್ಲಿ ತುಂಗಭದ್ರಾ ನದಿಗೆ ಒಡ್ಡು ಹಾಕಿ ನೀರು ತಿರುಗಿಸಲಾಗುತ್ತದೆ. 1521ರಲ್ಲಿ ಇದನ್ನು ನಿರ್ಮಿಸಿರುವುದಾಗಿ ಅಲ್ಲಿನ ಶಿಲಾಶಾಸನ ತಿಳಿಸುತ್ತದೆ. ನದಿಯ ಮಧ್ಯೆ ಇದ್ದ ಒಂದು ನಡುಗಡ್ಡೆಯನ್ನು ಉಪಯೋಗಿಸಿಕೊಂಡು ಇದರ ನಿರ್ಮಾಣವಾಗಿತ್ತು. ಅಲ್ಲಿಂದ ನೀರು ಹರಿಸಲು ಬಸವಣ್ಣ ಹೆಸರಿನ ಕಾಲುವೆ ತೋಡಲಾಯ್ತು. ಇದಕ್ಕೆ ನಂದಿಕಾಲುವೆ ಎಂಬ ಹೆಸರೂಇತ್ತು ಎನ್ನುತ್ತದೆ ಇತಿಹಾಸ. ಕೃಷ್ಣದೇವರಾಯನ ಕಾಲದಲ್ಲಿ ಈ ಕಾಲುವೆಯನ್ನು ಹೊಸಪೇಟೆಯ ಅಮರಾವತಿಯವರೆಗೆ ಮಾತ್ರ ನಿರ್ಮಿಸಲಾಗಿತ್ತು. ಬ್ರಿಟೀಷರ ಆಡಳಿತಾವಧಿಯಲ್ಲಿ ಇದನ್ನು ಈಗಿನ ಕಾಮಲಾಪುರದವರೆಗೂ ವಿಸ್ತರಿಸಲಾಯಿತು.

1950ರಲ್ಲಿ ತುಂಗಭದ್ರಾ ಜಲಾಶಯ ನಿರ್ಮಾಣವಾದಾಗ ಕೋರಗಲ್ ಅಣೆಕಟ್ಟು ಮತ್ತು ಜಲಾಶಯದವರೆಗಿನ ಕಾಲುವೆ ಹಿನ್ನೀರಿನಲ್ಲಿ ಮುಳುಗಡೆಯಾಯಿತು. ಆದರೆ ಸಾವಿರಾರು ಎಕರೆಗೆ ನೀರುಣಿಸುವ ಕಾಲುವೆಯನ್ನು ಕಡೆಗಣಿಸಲು ಸಾಧ್ಯವಿರಲಿಲ್ಲ. ಹಾಗಾಗಿ ಜಲಾಶಯದಿಂದಲೇ ನೀರು ಹರಿಸಲಾಗುತ್ತಿದೆ. ಅಮರಾವತಿ ಬಡಾವಣೆ ಬಳಿ ನಾಗಪ್ಪನಕಟ್ಟೆಯ ಹತ್ತಿರ ಹೊಸಪೇಟೆ ನಗರಕ್ಕೆ ಆಗಮಿಸುವ ಕಾಲುವೆ, ದೋಬಿಘಾಟ್, ಬಸವೇಶ್ವರ ಬಡಾವಣೆ ಮೂಲಕ ಸಾಗಿ, ಮೀರ್‌ಅಲಂ ಮತ್ತು ಸರಸ್ವತಿ ಟಾಕೀಸುಗಳ ಮಧ್ಯೆ ಹಾದು ಅನಂತಶಯನಗುಡಿ ಪಕ್ಕದಲ್ಲಿ ಮುಂದೆ ಅಚ್ಚುಕಟ್ಟು ಪ್ರದೇಶಕ್ಕೆ ಹೋಗುತ್ತದೆ. ಅನಂತಶಯನಗುಡಿ ಗ್ರಾಮದ ಪಕ್ಕದಲ್ಲೇ ಕಾಲುವೆ ಸಾಗುತ್ತಿದ್ದು ಅಲ್ಲಿ ಸುಮಾರು 500 ಮೀಟರ್‌ದಲ್ಲಿ ಪ್ರಸಿದ್ಧ ಅನಂತಶಯನ ದೇವಾಲಯ ಬರುತ್ತದೆ. ಹೀಗೆ ಹೊಸಪೇಟೆ ನಗರದ ಮಧ್ಯ ಭಾಗದಲ್ಲೇ ಹರಿಯುವ ಕಾಲುವೆ ಈಗ ಕೊಳಚೆಮಯ. ನಗರದಲ್ಲಿ ಹರಿಯುವ ಉಳಿದ ಚರಂಡಿಗಳಂತೆಯೇ ಇದೂ ಒಂದು



ಎಂಬಂತಿದೆ.

ಈ ಕಾಲುವೆಯು ಸಾವಿರಾರು ಎಕರೆಗೆ ನೀರುಣಿಸುತ್ತದೆ. ಹೊಸಕೋಟೆ, ಹೊಸೂರು, ಅಮರಾವತಿ, ಹೊಸಪೇಟೆ, ಅನಂತಶಯನಗುಡಿ, 88 ಮುದ್ಲಾಪುರ, ಮಲಪನಗುಡಿ, ಕಮಲಾಪುರ, ನಾಗೇನಹಳ್ಳಿ, ಕಾರಿಗನೂರು ಮುಂತಾದ ಹಳ್ಳಿಗಳ ಮಾಗಾಣಿಗಳು ಈ ಕಾಲುವೆಯಿಂದ ನೀರು ಪಡೆಯುತ್ತವೆ. ವರ್ಷದ ಹನ್ನೊಂದು ತಿಂಗಳೂ ನೀರು ಹರಿಯುವುದು ಇದರ ವಿಶೇಷ. ಕಾಲುವೆಯು 16.50 ಕಿಲೋಮೀಟರ್ ವಿದ್ದು 1240 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸುತ್ತದೆ. ರೈತರು ಕಬ್ಬು, ಭತ್ತ, ಬಾಳೆ, ಮೆಕ್ಕೆಜೋಳ, ತರಕಾರಿ ಇತ್ಯಾದಿ ಬೆಳೆಯುತ್ತಾರೆ. ಕಾಲುವೆ ವ್ಯಾಪ್ತಿಯಲ್ಲಿ ಅಮರಾವತಿ ಮತ್ತು ಮಲಪನಗುಡಿ ನೀರು ಬಳಕೆದಾರರ ಸಹಕಾರ ಸಂಘಗಳು ಬರುತ್ತವೆ.

ಇಷ್ಟು ಐತಿಹಾಸಿಕ ಮಹತ್ವ ಹೊಂದಿರುವ ಈ ಕಾಲುವೆಯ ಮೌಲ್ಯವನ್ನೇ ಹೊಸಪೇಟೆಯ ನಾಗರಿಕರು ಅರ್ಥ ಮಾಡಿಕೊಳ್ಳದಿರುವುದು ದುರದೃಷ್ಟಕರ. ಮನೆ, ಅಂಗಡಿಗಳ, ಆಸ್ಪತ್ರೆಗಳ ಕಸ, ಹಳೆ ಬಟ್ಟೆಗಳು, ಪ್ಲಾಸ್ಟಿಕ್ ಬಾಟಲಿ, ಗಾಜು, ಸತ್ತ ಪ್ರಾಣಿಗಳನ್ನು ಎಸೆಯುತ್ತಾರೆ, ಮನೆಗಳ ಬಚ್ಚಲು ಹಾಗೂ ಕಕ್ಕಸ್ಸು ನೀರನ್ನು ನೇರವಾಗಿ ಈ ಕಾಲುವೆಗ ಸಂಪರ್ಕಿಸಲಾಗಿದೆ. ಕೆಲವಡೆ ಕಾಲುವೆಯ ಎರಡೂ ದಂಡೆಗಳು ಒತ್ತುವರಿಯಾಗಿವೆ.

ನಗರದಲ್ಲಿ ಹತ್ತಾರು ಕುಟುಂಬಗಳು, ದೋಬಿಗಳು ಬಟ್ಟೆ ಒಗೆಯಲು ಈ ಕಾಲುವೆಯನ್ನೇ ಆಶ್ರಿಯಿಸಿದ್ದಾರೆ, ಹೆಣ್ಣು ಮಕ್ಕಳು ಪಾತ್ರೆಗಳನ್ನು ತೊಳೆಯುತ್ತಾರೆ, ದಂಡೆಯಲ್ಲಿ ನಿಂತು ಕೆಲವರು ಮೀನು ಹಿಡಿಯುತ್ತಾರೆ. ಆದರೆ ಯಾರಿಗೂ ಈ ಕಾಲುವೆಯನ್ನು ಸ್ವಚ್ಚವಾಗಿಟ್ಟುಕೊಳ್ಳಬೇಕು ಎಂಬ ಅರಿವು ಮೂಡದಿರುವುದು ದುರಂತವೇಸರಿ. ಯಾಕೆಂದರೆ ಕೊಳಕಾದ ಕಾಲುವೆಯ ಕಲುಷಿತ ನೀರಿನಿಂದ ಹಲವು ಖಾಯಿಲೆಗಳಿಗೆ ತುತ್ತಾಗಬಹುದು, ಇದೇ ನೀರು ಮುಂದೆ ಗದ್ದೆಗಳಿಗೆ ಹರಿದು ಅಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಚರ್ಮದ ರೋಗಗಳು ಬರಬಹುದು. ಮಣ್ಣಿನ ಫಲವತ್ತತೆ ಹಾಳಾಗುತ್ತದೆ, ಅಂತರ್ಜಲವೂ ಮಲಿನವಾಗುವ ಸಂಭವವಿದೆ.

ವಿಜಯನಗರ ಕಾಲುವೆಗಳ ಆಧುನೀಕರಣ ಯೋಜನೆಯಿಂದ ಬಸವಣ್ಣ ಕಾಲುವೆಗೆ ಸಿಮೆಂಟ್ ಲೈನಿಂಗ್ ಮಾಡಲಾಗುತ್ತಿದೆ. ಹೊಸಪೇಟೆ ನಗರದ ವ್ಯಾಪ್ತಿಯಲ್ಲಿ ಇಲ್ಲಿನ ವಸ್ತು ಸ್ಥಿತಿಯನ್ನು ಪರಿಶೀಲಿಸಿ ಆಧುನೀಕರಣ ಕೈಗೊಳ್ಳುವ ಚರ್ಚೆ ನಡೆಯುತ್ತಿದೆ.

ಕಾಲುವೆಯ ಉಸ್ತುವಾರಿ ನೋಡಿಕೊಳ್ಳುವ ಕರ್ನಾಟಕ ನೀರಾವರಿ ನಿಗಮವಾಗಲೀ ಅಥವಾ ನಗರಸಭೆಯಾಗಲೀ ಕಾಲುವೆ ಗಲೀಜು ಮಾಡುವವರನ್ನು ಸದಾ ಕಾವಲು ಮಾಡುವುದು ಅಸಾಧ್ಯ. ನಾಗರಿಕರಲ್ಲೇ ಅರಿವು ಮೂಡಬೇಕು. ಯುವಪೀಳಿಗೆ ಮತ್ತು ಮಕ್ಕಳಿಗೆ ಈ ಕಾಲುವೆಯ ಇತಿಹಾಸ ತಿಳಿಸಬೇಕು.

ಕಳೆದ ಐನೂರು ವರ್ಷಗಳಿಂದ ಬಸವಣ್ಣ ಕಾಲುವೆಯಲ್ಲಿ ಸತತವಾಗಿ ನೀರು ಹರಿಯುತ್ತಲೇ ಇದೆ. ಯಾವುದೇ ಖರ್ಚಿಲ್ಲದೇ ಸಾವಿರಾರು ಎಕರೆಗಳಿಗೆ ನೀರುಣಿಸುತ್ತಿದೆ. ಅದಕ್ಕೆ ಪ್ರತಿಯಾಗಿ ನಾವು ಕಾಲುವೆಗೆ ಏನು ಕೊಡುತ್ತಿದ್ದೇವೆ. ಕೊಳಕು, ದುರ್ನಾತ ಹಾಗೂ ನಿರ್ಲಕ್ಷ್ಯ.

ಇದನ್ನು ನಿರ್ಮಿಸಿದ ಶ್ರೀಕೃಷ್ಣದೇವರಾಯರಿಗೆ ಚಿರಋಣಿಗಳಾಗಿರಬೇಕು. ಆತನ ಹಾಗೂ ಅವನ ಪರಿವಾರದ ದಾಹ ತಣಿಸಿದ, ಅವರು ವಿಶ್ರಮಿಸಿದ, ಹಸಿವು ನೀಗಿಸಿದ ಕಾಲುವೆ ಇದು. ನಾವೆಲ್ಲಾ ಅಪಾರವಾಗಿ ಗೌರವಿಸುವ ಅರಸ ಶ್ರೀಕೃಷ್ಣದೇವರಾಯ. ಆ ಗೌರವ ಕೇವಲ ತೋರಿಕೆಯಾಗಬಾರದು. ಆತ ನಿರ್ಮಿಸಿದ ಹಲವು ಸ್ಮಾರಕಗಳು, ದೇವಾಲಯಗಳು, ಅರಮನೆಗಳು ಹಾಳಾಗಿರಬಹುದು. ಆದರೆ ಈ ಕಾಲುವೆ ಸತತ 500 ವರ್ಷಗಳಿಂದ ಜೀವಂತ ಸ್ಮಾರಕವಾಗಿ ನಮ್ಮ ಕಣ್ಣ ಮುಂದಿದೆ. ಅದನ್ನು ಸುಂದರವಾಗಿ, ಸ್ವಚ್ಚವಾಗಿ ಇಟ್ಟುಕೊಳ್ಳುವುದೇ ನಾವು ಆ ಶ್ರೇಷ್ಠ ಅರಸನಿಗೆ ಕೊಡುವ ಗೌರವ.



– ಮಲ್ಲಿಕಾರ್ಜುನ ಹೊಸಪಾಳ್ಯ

# ಹಿರಿಯ ನಟಿ ಡಾ.ಲೀಲಾವತಿ ನಿಧನಕ್ಕೆ ವಿಧಾನಸಭೆ ಸಂತಾಪ

■ ಹಂಪಿ ಟೈಮ್ಸ್ ಬೆಳಗಾವಿ

ಬೆಳಗಾವಿ ಚಳಿಗಾಲದ ಅಧಿವೇಶನದ ಸೋಮವಾರದ ವಿಧಾನಸಭೆ ಕಲಾಪದಲ್ಲಿ, ಡಿ.8 ರಂದು ನಿಧನರಾದ ಹಿರಿಯ ಚಲಚಿತ್ರ ನಟಿ ಡಾ.ಲೀಲಾವತಿ ನಿಧನಕ್ಕೆ ಸಂತಾಪ ಸೂಚಿಸಿ ಒಂದು ನಿಮಿಷದ ಮೌನಾಚರಣೆ ಆಚರಿಸಲಾಯಿತು.

ಸಭಾಧ್ಯಕ್ಷ ಯು.ಟಿ.ಖಾದರ್ ಸಂತಾಪ ಸೂಚನೆ ನಿರ್ಣಯ ಮಂಡಿಸಿ, ಡಾ.ಲೀಲಾವತಿ ನಾಯಕಿಯಾಗಿ, ಪೋಷಕ ನಟಿಯಾಗಿ ವಿಭಿನ್ನ ಹಾಗೂ ವೈವಿಧ್ಯಮಯ ಪಾತ್ರಗಳಲ್ಲಿ ಕಪ್ಪು-ಬಿಳುಪು ಕಾಲದಿಂದ ಕಲರ್ಫುಲ್ ಸಿನಿಮಾ ಸ್ಕೋಪ್‌ವರೆಗೆ ಎಲ್ಲಾ ಪ್ರಸಿದ್ಧ ನಾಯಕ ನಟರೊಂದಿಗೆ ನಟಿಸಿ ಜನಪ್ರಿಯರಾಗಿದ್ದರು. ಕಾಲೇಜ್ ಹಿರೋ ಚಿತ್ರ ನಿರ್ಮಿಸಿದ್ದ ಅವರು ಕನ್ನಡದ ಕಂದ ಚಲನಚಿತ್ರಕ್ಕೆ ಚಿತ್ರಕಥೆ ಬರೆದಿದ್ದರು. ಡಾ.ರಾಜಕುಮಾರ್ ಹಾಗೂ ಫಿಲಂ ಫೇರ್ ಸೇರಿದಂತೆ ಹಲವು ಪ್ರಶಸ್ತಿಗೆ ಭಾಜನರಾಗಿದ್ದರು ಎಂದರು.



ಸಂತಾಪ ಸೂಚನೆ ನಿರ್ಣಯ ಬೆಂಬಲಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್, ಡಾ.ಲೀಲಾವತಿ ಅತಿ ವಿರಳ ಹಾಗೂ ಅಪರೂಪದ ತಾರೆಯಾಗಿದ್ದರು. ತಮ್ಮ ಸ್ವಂತ ಹಣದಲ್ಲಿ ಸಾರ್ವಜನಿಕ ಆಸ್ಪತ್ರೆ ಹಾಗೂ ಪಶುಚಿಕಿತ್ಸಾಲಯ ಕಟ್ಟಿಸಿ ಸಮಾಜ ಸೇವೆಯನ್ನು ಮಾಡಿದ್ದಾರೆ. ಅವರ ಪಾತ್ರಗಳು ಸಾಮಾಜಿಕ ಬದಲಾವಣೆಗೆ ಕಾರಣವಾಗಿವೆ. ಅವರ ಅಗಲಿಕೆ ಚಿತ್ರ ಪ್ರೇಮಿಗಳು ಹಾಗೂ ಎಲ್ಲಾ ಪ್ರಾಣಿಪ್ರಿಯರಿಗೂ ತುಂಬಲಾರದ ನಷ್ಟವಾಗಿದೆ ಎಂದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮಾತನಾಡಿ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಅಭಿನಯಸಿ ಡಾ.ಲೀಲಾವತಿಯವರು ತಮ್ಮ ಪ್ರೌಢಿಮೆಯನ್ನು ಮೆರೆದಿದ್ದಾರೆ. ಸಮಾಜ ನನಗೇನು ಕೊಟ್ಟಿದೆ? ಎಂದು ಯೋಚಿಸುವವರ ಮಧ್ಯೆ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಧೀಮಂತ ವ್ಯಕ್ತಿತ್ವ ಅವರದು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಆಸ್ಪತ್ರೆ ಕಟ್ಟಲು ಅನುಮತಿ ಕೊಡಿಸುವಂತೆ ನನ್ನ ಬಳಿ ಬಂದಿದ್ದರು. ಡಾ.ಲೀಲಾವತಿ ಅವರು ಸ್ವಂತ ಖರ್ಚಿನಲ್ಲಿ ನಿರ್ಮಿಸಿದ ಆಸ್ಪತ್ರೆಯಲ್ಲಿ ಅವರ ಪ್ರತಿಮೆಯನ್ನು ನಿರ್ಮಿಸುವಂತೆ ಸರ್ಕಾರಕ್ಕೆ ಕೋರಿದರು.

ಜೆ.ಡಿ.ಎಸ್.ಶಾಸಕ ಬಾಲಕೃಷ್ಣ ಮಾತನಾಡಿ, 42 ಚಿತ್ರಗಳಲ್ಲಿ ಡಾ.ರಾಜ್‌ಕುಮಾರ್ ಅವರೊಂದಿಗೆ ಅಭಿನಯಸಿದ್ದ ಡಾ.ಲೀಲಾವತಿಯವರು ಆರಂಭದಲ್ಲಿ ತುಂಬಾ ಸಂಕಷ್ಟ ಅನುಭವಿಸಿ ಚಿತ್ರರಂಗಕ್ಕೆ ಆಗಮಿಸಿದ್ದರು. ಮಗ ವಿನೋದ್‌ಕುಮಾರ್ ಅವರೊಂದಿಗಿನ ಅವರ ಬಾಂಧವ್ಯ ಎಲ್ಲರಿಗೂ ಪ್ರೇರಣೆಯಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಡಾ.ಲೀಲಾವತಿ ಅವರು ಅಜಾತಶತ್ರುವಾಗಿದ್ದರು. ಸುಮಾರು 32 ವರ್ಷಗಳಿಂದವೈಯಕ್ತಿಕವಾಗಿಪರಿಚಯವಿದ್ದರು. ಕಳೆದ 20 ದಿನಗಳ ಹಿಂದೆ ನನ್ನ ಮನೆಗೆ ಆಗಮಿಸಿ ನೂತನವಾಗಿ ನಿರ್ಮಿಸಿದ್ದ ಪಶು ಆಸ್ಪತ್ರೆ ಉದ್ಘಾಟನೆ ಮಾಡುವಂತೆ ನನ್ನನ್ನು ಆಹ್ವಾನಿಸಿದ್ದರು. ಅವರ ಆಹ್ವಾನದ ಮೇರೆಗೆ ಹೋಗಿ ಪಶು ಆಸ್ಪತ್ರೆ ಉದ್ಘಾಟಿಸಿ, ಅಗತ್ಯ ಇರುವ ಸಿಬ್ಬಂದಿ ನೇಮಿಸಿ ಆಸ್ಪತ್ರೆ ಕಾರ್ಯಾರಂಭ ಮಾಡಲು ಅನುವು ಮಾಡಿಕೊಟ್ಟಿದ್ದೆ. ಸಮಾಜ ಸೇವೆ ಮಾಡಿ ಹೃದಯ ಶ್ರೀಮಂತಿಕೆ ಮೆರೆದಿದ್ದಾರೆ. ದೈವತ್ವ ಗುಣ, ಶಾಂತಿ ಹಾಗೂ ಸಂತೋಷ, ತೃಪ್ತಿ ಅವರಲ್ಲಿ ಮನೆ ಮಾಡಿತ್ತು. ವಿರೋಧ ಪಕ್ಷದ ನಾಯಕರ ಸಲಹೆಯಂತೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಆಸ್ಪತ್ರೆ ಬಳಿ ಡಾ.ಲೀಲಾವತಿ ಅವರ ಪ್ರತಿಮೆ ನಿರ್ಮಿಸುವುದಾಗಿ ಹೇಳಿದರು.

# ಪಡಿತರ ಅಕ್ಕಿ ಕಳ್ಳ ಸಾಗಾಣಿಕೆ ತಡೆಯಲು ಸಂಪೂರ್ಣ ಪ್ರಯತ್ನ

■ ಹಂಪಿ ಟೈಮ್ಸ್ ಬೆಳಗಾವಿ

ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ವಿತರಿಸುವ ಪಡಿತರ ಅಕ್ರಮ ತಡೆಗೆ ಸಂಪೂರ್ಣ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವ ಕೆ.ಹೆಚ್. ಮುನಿಯಪ್ಪ ಇಂದು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.



ಸದಸ್ಯ ಭಾರತಿ ಶೆಟ್ಟಿ ಅವರ ಚುಕ್ಕೆಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸುವ ಪಡಿತರ ಅಕ್ರಮ ಸಾಗಾಣಿಕೆ ಕಂಡು ಬಂದಲ್ಲಿ ಕೂಡಲೇ ದಾಳಿ ನಡೆಸಿ, ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಪ್ರಕರಣ ದಾಖಲಿಸಿ, ಅಕ್ರಮ ಪಡಿತರ ದಾಸ್ತಾನು ಮುಟ್ಟುಗೋಲು ಹಾಕಿಕೊಂಡು, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಮುಟ್ಟುಗೋಲು ದಾಸ್ತಾನನ್ನು ವಿಲೇ ಮಾಡಿ, ವಿಲೇ ಪಡಿಸಿದ ಪಡಿತರ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲಾಗುತ್ತಿದೆ.

ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರೆಂದು ಕಂಡುಬಂದ – ವ್ಯಕ್ತಿಗಳ ವಿರುದ್ಧ ಹಾಗೂ ಈ ಘಟನೆಗಳಿಗೆ ಕಾರಣಕರ್ತರಾದ ಅಧಿಕಾರಿ/ನೌಕರರ ವಿರುದ್ಧ ಸಂಬಂಧಪಟ್ಟ ಪೊ?ಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಿ ಆಪಾದನೆಗಳ ಬಗ್ಗೆ ದೋ?ಾರೋಪಣೆ ಪಟ್ಟಿಯನ್ನು ಸಂಬಂಧಿಸಿದ ನ್ಯಾಯಾಲಯಗಳಲ್ಲಿ ದಾಖಲಿಸಲಾಗುತ್ತಿದ್ದು, ಕಾನೂನು ರೀತ್ಯಕ್ರಮ ಜರುಗಿಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಏಪ್ರಿಲ್-2023 ರಿಂದ ನವೆಂಬರ್-2023 ರ ಅಂತ್ಯದವರೆಗೂ ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಪಡಿತರ ಆಹಾರಧಾನ್ಯ ಕಳ್ಳಸಾಗಾಣಿಕೆಯ ಒಟ್ಟು 251 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ 232 ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸಿದ್ದು, ಒಟ್ಟು 31,32,08,215 ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು, ಈ ಪ್ರಕರಣಗಳಲ್ಲಿ ಒಟ್ಟು 385 ಆರೋಪಿಗಳನ್ನು ಬಂಧಿಸಿ, 167 ವಾಹನಗಳನ್ನು ವಶಪಡಿಸಿ ಕೊಳ್ಳಲಾಗಿರುತ್ತದೆ ಎಂದರು.

# ಉತ್ತರ-ದಕ್ಷಿಣ ಮುಖಾಮುಖಿ, ದಕ್ಷಣ ಕನ್ನಡಕ್ಕೆ ಗೆಲುವು

## ಮೂಡಬಿದಿರೆಯ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಬಾಲಕಿಯರ ತಂಡ ಮತ್ತು ಬಾಲಕರ ತಂಡ ರಾಜ್ಯಕ್ಕೆ ಪ್ರಥಮ

## ಹೊಸಪೇಟೆಯಲ್ಲಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಸಮಾರೋಪ





**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ನಡೆದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿ ಫೈನಲ್ ಹಾಗೂ ಫೈನಲ್ ಟೂರ್ನಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ ಮೂಡಿಬಿದರೆಯ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಬಾಲಕ ಹಾಗೂ ಬಾಲಕಿಯರ ತಂಡಗಳು ಪಂದ್ಯಾವಳಿಗಳಲ್ಲಿ ಜಯಭೇರಿ ಬಾರಿಸಿ ರಾಜ್ಯಕ್ಕೇ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

ಮುಂಜಾನೆಯ ಎಳೆ ಬಿಸಿಲಿನಲ್ಲಿ ಆರಂಭವಾದ ಬಾಲಕಿಯರ ಬಿರುಸಿನ ಸೆಮಿ ಫೈನಲ್ ಪಂದ್ಯಗಳಲ್ಲಿ ಮೊದಲಿಗೆ ಮೈಸೂರು ತಂಡದ ವಿರುದ್ಧ 2:0 ಸೆಟ್‌ಗಳಿಂದ ದಕ್ಷಿಣ ಕನ್ನಡ ಜಯಗಳಿಸಿತು. ಹಾಸನ ಜಿಲ್ಲೆಯ ಬಾಲಕಿಯರ ತಂಡದ ವಿರುದ್ಧ 2:0 ಸೆಟ್‌ಗಳಿಂದ ಉತ್ತರ ಕನ್ನಡ ಜಿಲ್ಲೆಯ ತಂಡ ಜಯಭೇರಿ ಬಾರಿಸಿತು.

ಫೈನಲ್ ಟೂರ್ನಿಯಲ್ಲಿ ಅಂತಿಮ ಘಟ್ಟಕ್ಕೆ ತಲುಪಿದ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಬಾಲಕಿಯರ ತಂಡಗಳು ಭಾರೀ ಸೆಣಸಾಟ ನಡೆಸಿದರೂ ಅಂತಿಮವಾಗಿ ತಂಡದ ನಾಯಕಿ ಸಾವಿತ್ರ ರಮೇಶ್ ಕರಿಗಾರ್ ಮುಂದಾಳತ್ವದಲ್ಲಿ ಬಿರುಸಿನ ಸ್ಪರ್ಧೆ ನೀಡಿದ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ ಮೂಡಬಿದರೆಯ ಆಳ್ವಾಸ್ ಪದವಿ ಪೂರ್ವ ಕಾಲೇಜು ರಾಜ್ಯಕ್ಕೇ ಪ್ರಥಮ ಸ್ಥಾನಗಳಿಸಿ ಜಯಭೇರಿ ಬಾರಿಸಿತು. ಅದೇ ರೀತಿ ಬಾಲಕರ ವಿಭಾಗದಲ್ಲಿ ಸೆಮಿ ಫೈನಲ್ ಟೂರ್ನಿಯಲ್ಲಿ ಸೆಣೆಸಾಡಿದ ಕೊಪ್ಪಳದ ವಿರುದ್ಧ 2:0 ಸೆಟ್‌ಗಳಿಂದ ದಕ್ಷಿಣ ಕನ್ನಡ ಜಿಲ್ಲೆಯು ಜಯಭೇರಿ ಬಾರಿಸಿತು. ಬಾಗಲಕೋಟೆಯ ತಂಡದ ವಿರುದ್ಧ 2:0 ಸೆಟ್‌ಗಳಿಂದ ಚಿಕ್ಕಮಗಳೂರು ಜಯಗಳಿಸಿತು. ಬಾಲಕರ ಫೈನಲ್ ಟೂರ್ನಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ತಂಡದ ವಿರುದ್ಧ ಭಾರೀ ಪೈಪೋಟಿ ನೀಡಿದ ದಕ್ಷಿಣ ಕನ್ನಡ ಜಿಲ್ಲೆಯ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ತಂಡದ ನಾಯಕ ಚರಣ್.ಎಸ್. ನೇತೃತ್ವದ ವಿದ್ಯಾರ್ಥಿಗಳು ಜಯಭೇರಿ ಬಾರಿಸಿದರು.

ರನ್ನರ್‌ಸ್ಗಳಾದ ಉತ್ತರ ಕನ್ನಡ (ಬಾಲಕಿಯರು) ಹಾಗೂ ಚಿಕ್ಕಮಗಳೂರು (ಬಾಲಕರ) ತಂಡಗಳಿಗೆ ಮೊದಲಿಗೆ ಟ್ರೋಫಿ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಅಂತಿಮವಾಗಿ ರಾಜ್ಯಕ್ಕೇ ಮೊದಲ ಸ್ಥಾನ ಗಳಿಸಿದ ದಕ್ಷಣ ಕನ್ನಡ ಜಿಲ್ಲೆಯ ಬಾಲಕರ ಹಾಗೂ ಬಾಲಕಿಯರ ತಂಡಗಳಿಗೆ ಭಾರೀ ಕರತಾಡನದೊಂದಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ.ಟಿ. ಹಾಗೂ ಇತರರು ಟ್ರೋಫಿ, ಪ್ರಮಾಣ ಪತ್ರ ಹಾಗೂ ಮೆಡಲ್‌ಗಳನ್ನು ನೀಡಿದರು.

ಸೆಮಿ ಫೈನಲ್ ಬಾಲಕರ ವಿಭಾಗದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಜೇತ ತಂಡಗಳು: ಕೊಪ್ಪಳ ತಂಡದ ವಿರುದ್ಧ 0:2 ಸೆಟ್‌ಗಳಿಂದ ದಕ್ಷಿಣ ಕನ್ನಡ ತಂಡ ವಿಜೇತ ಬಾಗಲಕೋಟೆ ತಂಡದ ವಿರುದ್ಧ 0:2 ಸೆಟ್‌ಗಳಿಂದ ಚಿಕ್ಕಮಗಳೂರು ತಂಡ ವಿಜೇತ

ಸೆಮಿ ಫೈನಲ್ ಬಾಲಕಿಯರ ವಿಭಾಗದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಜೇತ ತಂಡಗಳು: ಮೈಸೂರು ತಂಡದ ವಿರುದ್ಧ 0:2 ಸೆಟ್‌ಗಳಿಂದ ದಕ್ಷಿಣ ಕನ್ನಡ ವಿಜೇತ ಹಾಸನ ತಂಡದ ವಿರುದ್ಧ 0:2 ಸೆಟ್‌ಗಳಿಂದ ಉತ್ತರ ಕನ್ನಡ ತಂಡ ವಿಜೇತ ಅಂತಿಮ ಘಟ್ಟದಲ್ಲಿ ಬಿರುಸಿನ ಸೆಣಸಾಟ ನಡೆಸಿದ ಬಾಲಕ ಹಾಗೂ ಬಾಲಕಿಯರ ತಂಡಗಳಿಗೆ ಪ್ರೇಕ್ಷಕರಿಂದ ಭಾರೀ ಕರತಾಡನದ ಪ್ರೋತ್ಸಾಹ ದೊರಕಿತ್ತು.

ಪಶಸ್ತಿ ವಿತರಿಸಿ ಮಾತನಾಡಿದ ಉಪನಿರ್ದೇಶಕ ಫಾಲಾಕ್ಷ.ಟಿ. ಸೆಮಿ ಫೈನಲ್ ಹಾಗೂ ಫೈನಲ್‌ನಲ್ಲಿ ನಡೆದ ಸ್ಪರ್ಧೆ ಭಾರಿ ಸೆಣಸಾಟದಿಂದ ಕೂಡಿದ್ದು ಎಲ್ಲಾ ತಂಡಗಳು ಭಾರೀ ಸ್ಪಧೆಯನ್ನೇ ಒಡ್ಡಿದ್ದರೂ ಸಹ, ಅಂತಿಮ ಗೆಲುವು ಒಬ್ಬರದಾಗುತ್ತದೆ. ಆದರೆ ಈ ಅಂತಿಮ ಘಟ್ಟದಲ್ಲಿ ಸ್ಪರ್ಧಿಸಿದ ತಂಡಗಳ ಚತುರ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿಭಾಗವಹಿಸಲುಸನ್ನದ್ದುಗೊಳಿಸಲಾಗುವುದು, ಸೋಲು ಗೆಲುವಿನ ಬಗ್ಗೆ ಚಿಂತಿಸದೆ ಕ್ರೀಡಾ ಮನೋಭಾವದಿಂದ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೋತ್ಸಾಹಿಸಿದರು.

ವಿಜಯನಗರ ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷ ನಾಗರಾಜ್ ಹವಾಲ್ದಾರ್ ಕ್ರೀಡಾಕೂಟ ಹೊಣೆ ಹೊತ್ತು ಕೊಂಡ ವಿಜ್ಞಾನ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಜಿ.ವಿದ್ಯಾಧರ ಹಾಗೂ ನಿರ್ದೇಶಕ ಸಾಗರ್ ಕೋದಂಡಪಾಣಿ ಸೇರಿದಂತೆ ಕ್ರೀಡಾಕೂಟದ ಯಶಸ್ವಿಗೆ ನೆರವಾದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು. ಕ್ರೀಡಾಕೂಟದಲ್ಲಿ ಯಶಸ್ವಿಯಾಗಿ ಅಂಪೈರ್‌ಗಳಾಗಿ ಕರ್ತವ್ಯ ನಿರ್ವಹಿಸಿ ಹಿರಿಯ ದೈಹಿಕ ನಿರ್ದೇಶಕರಾದ ಮಧುಕರ, ಶಿವಕುಮಾರ್, ವೆಂಕಟೇಶ್, ಪ್ರಶಾಂತ್, ಸಂತೋಷ ರೆಡ್ಡಿ ಹಾಗೂ ರಾಜ್ಯ ವೀಕ್ಷಕರವರನ್ನು ಸನ್ಮಾನಿಸಲಾಯಿತು.

ಮುಕ್ತಾಯ ಸಮಾರಂಭದಲ್ಲಿ ವಿಜ್ಞಾನ್ ಕಾಲೇಜಿನ ಪ್ರಾಚಾರ್ಯ ಜಿ.ವಿದ್ಯಾಧರ, ನಿರ್ದೇಶಕ ಸಾಗರ್ ಕೋದಂಡಪಾಣಿ, ವಿವಿಧ ತಂಡಗಳ ನಾಯಕರು, ಪ್ರಾಚಾರ್ಯರು, ಉಪನ್ಯಾಸಕರು, ಸಾರ್ವಜನಿಕರು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.




## ಮೈಕ್ರೋ ನ್ಯೂಸ್

### ಖಾಲಿ ಇರುವ ಸರ್ಕಾರಿ ಜಾಗಗಳ ರಕ್ಷಣೆಗೆ ಬೀಟ್ ಸಿಸ್ಟಂ - ಕಂದಾಯ ಸಚಿವ ಕೃಷ್ಣಬೈರೇಗೌಡ

**ಸುವರ್ಣಸೌಧ ಬೆಳಗಾವಿ:**
ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಜಾಗಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆ. ಮೊಬೈಲ್ ಆಪ್ ಮೂಲಕ ಖಾಲಿ ಜಾಗಗಳ ಜಿ.ಪಿ.ಎಸ್ ಲೋಕೇಷನ್ ಮಾರ್ಕ್ ಮಾಡಿ, ಬೌಂಡರಿ ಫಿಕ್ಸ್ ಮಾಡಲಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಖಾಲಿ ಜಾಗಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲು ಬೀಟ್ ಸಿಸ್ಟಂ ಜಾರಿ ಮಾಡಲಾಗಿದೆ. ಒತ್ತುವರಿ ಯಾಗಿರುವುದು ಕಂಡುಬಂದರೆ ಕೂಡಲೇ ಸಂಬಂಧ ಪಟ್ಟ ತಹಶೀಲ್ದಾರ್ ತೆರವುಗೊಳಿಸಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಸೋಮವಾರ ವಿಧಾನ ಸಭಾ ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಮಂಡ್ಯ ಶಾಸಕ ರವಿಕುಮಾರಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿ ಅವರು ಮಾತನಾಡಿದರು.

ಬೀಟ್ ಸಿಸ್ಟಂ ಮೊಬೈಲ್ ಲೋಕೇಷನ್ ಆಧಾರದ ಮೇಲೆ ಕಾರ್ಯ ನಿರ್ವಹಿಸುವುದರಿಂದ ಅಧಿಕಾರಿಗಳು ಕಡ್ಡಾಯ ಸ್ಥಳಕ್ಕೇ ತೆರಳಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ಜಾಗಗಳನ್ನು ಕಬಳಿಸುವಲ್ಲಿ ಅಧಿಕಾರಿಗಳು ಶಾಮೀಲು ಆಗುತ್ತಿದ್ದಾರೆ ದುರ್ದೈವದ ಸಂಗತಿ. ಈಗಿರುವ ಕಾನೂನುಗಳನ್ನು ಸರಿಯಾಗಿ ಪಾಲನೆ ಮಾಡಿದರೆ ಸರ್ಕಾರಿ ಜಾಗಗಳನ್ನು ರಕ್ಷಿಸಿಕೊಳ್ಳಬಹುದು ಎಂದರು.

### ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ ಜಾರಿ: ಡಿಸಿ ಪ್ರಶಾಂತ್ ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ಡಿ.11ರಿಂದ 16ರವರೆಗೆ ಪ್ರಥಮ ಮತ್ತು ದ್ವಿತೀಯ ವರ್ಷದ ಡಿಎಲ್‌ಇಡಿ ಮತ್ತು ಡಿಪಿಇಡಿ ಪೂರಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಆವರಣವನ್ನು ಸಿಆರ್‌ಪಿಸಿ ಕಲಂ 144ರ ಮೇರೆಗೆ ನಿರ್ಭಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಯೂ ಆಗಿರುವ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಬೆಂಗಳೂರು ಇವರ ವತಿಯಿಂದ ನಗರದ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಡಿಎಲ್‌ಇಡಿ ಮತ್ತು ಡಿಪಿಇಡಿ ಪೂರಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿರ್ಭಂದಿತ ಪ್ರದೇಶವೆಂದೂ ಹಾಗೂ ಸುತ್ತಮುತ್ತಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಅವರು ಆದೇಶಿಸಿದ್ದಾರೆ.

ಸದರಿ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶ ನಿಷೇಧಿಸಲಾಗಿದ್ದು, ಈ ಆದೇಶವು ಪರೀಕ್ಷಾ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.




# ದಮ್ಮು ತಾಖತ್ ಬಿಜೆಪಿ ಶಾಸಕರಿಗೆ ಇಲ್ಲ

**ಮೊದಲ ಪುಟದಿಂದ**

ಅವರಂತಹವರು ಬಹಿರಂಗವಾಗಿ ಬಿ.ಎಸ್. ಯಡಿಯೂರಪ್ಪನವರಿಂದ ಹಿಡಿದು ಆರ್ . ಅಶೋಕ್ ವರೆಗೆ ಎಲ್ಲರ ವಿರುದ್ಧ ಹರಿಹಾಯು ತ್ತಿದ್ದಾರೆ. ಇದನ್ನೆಲ್ಲ ಗಮನಿಸುತ್ತಿರುವ ರಾಜ್ಯದ ಜನತೆ ಬಿಜೆಪಿ ಶಾಸಕರಿಗೆ ಬೀದಿ ಬೀದಿಯಲ್ಲಿ ಛೀಮಾರಿ ಹಾಕುತ್ತಿದ್ದಾರೆ. ಇದರಿಂದ ಮುಖ ಎತ್ತಿಕೊಂಡು ಹೋಗಲಾಗದ ಬಿಜೆಪಿ ಶಾಸಕರು ರಾಜ್ಯದ ಜನರ ಗಮನ ಬೇರೆ ಕಡೆ ಸೆಳೆಯುವ ಉದ್ದೇಶದಿಂದ ಕಲಾಪಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ.

ಮಾತೆತ್ತಿದರೆ ದಮ್ಮು ತಾಖತ್ ಬಗ್ಗೆ ಮಾತನಾಡುವ ಬಿಜೆಪಿ ನಾಯಕರು ವಿಧಾನಮಂಡಲದ ಕಲಾಪದಲ್ಲಿ ಭಾಗವಹಿಸುವ ಧೈರ ತೋರಬೇಕು. ವಿಧಾನಸಭಾ ಅಧಿವೇಶ ನವನ್ನು ಕರೆದಿರುವುದೇ ರಾಜ್ಯ ಸರ್ಕಾರದ ಆಡಳಿತದ ವಿಮರ್ಶೆಗೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಎಡವಿದ್ದರೆ, ತಪ್ಪುಗಳನ್ನು ಮಾಡಿದ್ದರೆ ಅದನ್ನು ಎತ್ತಿ ತೋರಿಸುವ ಕೆಲಸವನ್ನುವಿರೋಧಪಕ್ಷಗಳುಮಾಡಬೇಕಾಗಿದೆ. ಆ ದಮ್ಮು ತಾಖತ್ ಬಿಜೆಪಿ ಶಾಸಕರಿಗೆ ಇಲ್ಲ. ಸಾಮಾನ್ಯವಾಗಿ ಆಡಳಿತ ಪಕ್ಷಗಳು ವಿರೋಧ ಪಕ್ಷಗಳನ್ನು ಎದುರು ಹಾಕಿಕೊಳ್ಳಲು ಹಿಂದೇಟು ಹಾಕುತ್ತದೆ. ನಮ್ಮ ರಾಜ್ಯದಲ್ಲಿ ವಿರೋಧಪಕ್ಷಗಳಿಗೆ ಆಡಳಿತ ಪಕ್ಷವನ್ನು ಎದುರಿಸುವ ಧೈರ್ಯವೇ ಇಲ್ಲ. ಪ್ರಧಾನಿ ನರೇಂದ್ರ ಮೋದಿಯವರಂತೆ ನಾವೇನು ವಿರೋಧಪಕ್ಷವನ್ನೇ ನಿರ್ನಾಮ ಮಾಡುವ ಬಗ್ಗೆ ಮಾತನಾಡುವುದಿಲ್ಲ. ಒಂದು ಸಮರ್ಥ ವಿರೋಧ ಪಕ್ಷ ಇರಬೇಕು ಎಂದು ಬಯಸುವವರು ನಾವು. ಈ ಹಿನ್ನೆಲೆಯಲ್ಲಿ ಬಿಜೆಪಿ ಶಾಸಕರು ಅನಗತ್ಯವಾದ ಧರಣಿಯನ್ನು ಕೈಬಿಟ್ಟು ಕಲಾಪದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡುತ್ತೇನೆ ಎಂದರು.

ನಿಮ್ಮ ಹೊಸ ಹೊಸ ಉತ್ಪನ್ನಗಳು, ವಿಶೇಷ ಕೊಡುಗೆಗಳು ಮತ್ತು ಕಾಲೇಜು ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ:
ಹಂಪಿ ಟೈಮ್ಸ್ : ಮೊ: 9448633038

# ಸಂಗೀತ ಮನುಷ್ಯರಲ್ಲಿ ಶಾಂತಿ, ಸೌಮ್ಯತೆ ತರುತ್ತದೆ

**ಹಂಪಿ ಟೈಮ್ಸ್ ಕೊಟ್ಟೂರು**

ಜಾನಪದ ಮತ್ತು ದೇವರ ಮೇಲಿನ ಭಕ್ತಿಯ ಪೂರ್ವಕ ಹಾಡುವ ಸುಗಮ ಸಂಗೀತದ ಹಾಡುಗಳು ಮನುಷ್ಯರಲ್ಲಿ ಶಾಂತತೆ ತರುತ್ತದಲ್ಲದೆ ಸದಾ ಆರೋಗ್ಯದಿಂದಿರುವಂತೆ ಮಾಡುತ್ತದೆ ಎಂದು ಶ್ರೀ ಆಂಜನೇಯ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಪಿ. ಮುನೇಗೌಡ ಹೇಳಿದರು.

ತಾಲೂಕು ಸಮೀಪದ ಬಳಿಗನೂರು ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶನಿವಾರ ಶ್ರೀ ಆಂಜನೇಯ ಸ್ವಾಮಿ ಸೇವಾ ಟ್ರಸ್ಟ್ ಬಳಿಗನೂರು ಮತ್ತು ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಕಾರದಿಂದ ಜಾನಪದ ಕಲಾವಿದ ಕ್ಷತ್ರಿ ನಾಗಪ್ಪ ತಂದೆ ಹುಲುಗಪ್ಪ ಅವರು ನಡೆಸಿಕೊಟ್ಟ ಸುಗಮ ಸಂಗೀತ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಜಾನಪದ ಹಾಡುಗಳನ್ನು ಆಲಿಸಿದ ಕಲಾಬಿಮಾನಿಗಳು ಕ್ಷತ್ರಿ ನಾಗಪ್ಪ ಅವರ ಹಾಡಿಗೆ ಪ್ರಶಂಸೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ತಬಲ ಸಾಥಿಯಾಗಿ ಪರಶುರಾಮಪ್ಪ, ಹಾರ್ಮೋನಿಯಂ ಬಸವರಾಜ್ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷ ಮಂಜುನಾಥಗೌಡ,ಗ್ರಾಪಂ ಸದಸ್ಯರು ಬಿ.ವಿಶಾಲಮ್ಮ ದುರುಗಪ್ಪ,ಶ್ರೀ ಆಂಜನೇಯ ಸ್ವಾಮಿ ಟ್ರಸ್ಟ್‌ನ ಉಪಾಧ್ಯಕ್ಷ ಎಂ.ಎಚ್. ಎಂ.ನಿಜಲಿಂಗಯ್ಯ, ಖಜಾಂಚಿ ಎಂ.ಬಸಪ್ಪ, ಕಾರ್ಯದರ್ಶಿ ಬಿ.ಕಾಡಪ್ಪ ಹಾಗೂ ನೂರಾರು ಗ್ರಾಮಸ್ಥರು ಪಾಲ್ಗೊಂಡಿದ್ದರು.



# ಕೃಷಿಕನ ದಣಿವು ನೋವುಗಳನ್ನು ದೂರಮಾಡುವ ಶಕ್ತಿ ಸಂಗೀತಕ್ಕಿದೆ




**ಹಂಪಿ ಟೈಮ್ಸ್ ಕೊಟ್ಟೂರು**

ಗ್ರಾಮೀಣ ಪ್ರದೇಶದ ಕೃಷಿಕ ವರ್ಗದ ಜನರ ದಣಿವು ಮತ್ತು ನೋವುಗಳನ್ನು ದೂರಮಾಡುವ ಶಕ್ತಿ ಸಂಗೀತಕ್ಕಿದೆ, ಹಾಗೆ ಗ್ರಾಮೀಣ ಕಲಾ ಪರಂಪರೆಯನ್ನು ಎತ್ತಿಡಿಯುತ್ತ ಸಾಗುತ್ತಿದೆ. ಎಂದು ಸಂಘದ ಅಧ್ಯಕ್ಷ ಬಿ. ಚನ್ನಬಸವನಗೌಡ ಹೇಳಿದರು.

ತಾಲೂಕು ಸಮೀಪದ ಬಳಿಗನೂರು ಗ್ರಾಮದಲ್ಲಿ ಶನಿವಾರ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಕಾರದೊಂದಿಗೆ ಶ್ರೀ ಬನ್ನಿ ಮಹಾಕಾಳಿ ಕಲಾವಿದರ ಸಂಘದ ಕಲಾವಿದರು ಕುಮಾರಿ ಸವಿತಾ ತಂದೆ ಬಿ.ಶಂಕ್ರಾಚಾರಿ ಸಂಗಮೇಶ್ವರ ಗ್ರಾಮ, ಅವರು ನಡೆಸಿದ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಬಲಾ ಸಾಥಿಯಾಗಿ ಮತ್ತಿಹಳ್ಳಿ ಶ್ರೀ ಮಹೇಶಾಚಾರಿ ಮತ್ತು ಹಾರ್ಮೋನಿಯಂ ಹನುಮಂತಾಚಾರಿ ಹಾಗೂ ಪಂಪಾಚಾರಿ ಅವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮಂಜಪ್ಪ,ಗ್ರಾ.ಪಂ ಸದಸ್ಯರು ಬಣಕಾರ ದುರುಗಪ್ಪ, ಗ್ರಾ.ಪಂ ಮಾಜಿ ಸದಸ್ಯರು ಹೆಚ್.ಸಿದ್ದಪ್ಪ,ಎಸ್. ಎಲ್.ಹನುಮನಗೌಡ ಸೇರಿದಂತೆ ನೂರಾರು ಕಲಾಭಿಮಾನಿಗಳು ಹಾಗೂ




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA